ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆ

ದಿನಾಂಕ : 23-08-2024 ಶುಕ್ರವಾರ, ಸಮಯ : ಬೆಳಿಗ್ಗೆ 10.00 ಗಂಟೆಗೆ

ಸ್ಥಳ : ಪ್ರಿನ್ಸೆಸ್ ಗಾಲ್ಫ್, ಗೇಟ್ ಸಂಖ್ಯೆ-09, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು-560080



Swabhimani Sahakari

Pages : 39 / 20₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 21
Issue - 07
July - 2024


ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



ಸತತ 3ನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿರುವ ಶ್ರೀ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ತಮ್ಮ ಸಚಿವ ಸಂಪುಟ ಸದಸ್ಯರೊಂದಿಗೆ ಭೇಟಿಯಾಗಿ, ರಾಜ್ಯದ ಜನತೆಯ ಪರವಾಗಿ ಅಭಿನಂದಿಸಿದರು ಹಾಗೂ ರಾಜ್ಯದ ಅಭಿವೃದ್ಧಿಗಾಗಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಮನವಿ ಸಲ್ಲಿಸಿದರು



ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾಗಿ ಶ್ರೀ ಅಮಿತ್ ಶಾ



ಶ್ರೀ ಕ್ರಿಶಿನ್‌ಪಾಲ್ ಗುರ್ಜರ್
ಸಹಾಯಕ ಸಹಕಾರ ಖಾತೆ ಸಚಿವರು



ಶ್ರೀ ಮುರಳೀಧರ್ ಮೊಹೋಲ್
ಸಹಾಯಕ ಸಹಕಾರ ಖಾತೆ ಸಚಿವರು

ಕೇಂದ್ರ ಸಂಪುಟದಲ್ಲಿ ಸಚಿವರುಗಳಾಗಿ ಅಧಿಕಾರ ಸ್ವೀಕರಿಸಿರುವ ಕರ್ನಾಟಕದ ಸಂಸದರು



ಶ್ರೀಮತಿ ನಿರ್ಮಲಾ ಸೀತಾರಾಮನ್
ಹಣಕಾಸು ಸಚಿವರು



ಶ್ರೀ ಎಚ್.ಡಿ. ಕುಮಾರಸ್ವಾಮಿ
ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರು



ಶ್ರೀ ಪ್ರಲ್ಹಾದ್ ಜೋಷಿ
ಆಹಾರ ಮತ್ತು ಪಡಿತರ ವಿತರಣೆ ಖಾತೆ ಸಚಿವರು

ಜುಲೈ ೦೬
ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ

#CoopsDay






ಶ್ರೀಮತಿ ಶೋಭಾ ಕರಂದ್ಲಾಜೆ
ಸಣ್ಣ, ಮಧ್ಯಮ ಕೈಗಾರಿಕೆ ಖಾತೆ ಸಚಿವರು



ಶ್ರೀ ವಿ. ಸೋಮಣ್ಣ
ಜಲಶಕ್ತಿ ಹಾಗೂ ರೈಲ್ವೆ ಖಾತೆ ಸಚಿವರು



ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ ಹೃದಯ ಪೂರ್ವಕ ನಮಸ್ಕಾರಗಳು ಹಾಗೂ ಮೊಹರಂ ಕೊನೆದಿನ ಹಾಗೂ ಗುರುಪೂರ್ಣಿಮದ ಶುಭಾಶಯಗಳು. ರಾಜ್ಯದಲ್ಲಿ 6300 ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಬಹುತೇಕ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇನ್ನೂ ಕೆಲ ಸಹಕಾರಿಗಳು ಆರ್ಥಿಕವಾಗಿ ಸದೃಡವಾಗಬೇಕಿರುತ್ತವೆ. ಆದರೆ ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಗತಿಯು ಸಹಕಾರಿಗಳ ಹಾಗೂ ಸರಕಾರದ ಗಮನ ಸೆಳೆಯುತ್ತಿರುವುದು ವಿಶೇಷ. ಈ ಕ್ಷೇತ್ರದಲ್ಲಿ ವಿಶೇಷವಾಗಿ ಯುವಕರು ಹೆಚ್ಚು ಆಸಕ್ತಿ ತೋರುತ್ತಿರುವುದು ಕ್ಷೇತ್ರದ ಪ್ರಗತಿಗೆ ಕಾರಣವೆಂದರೆ ತಪ್ಪಾಗಲಾರದು. ಈ ಕ್ಷೇತ್ರದ ಕಾರ್ಯಾಚರಣೆಯ ಬಗ್ಗೆ ಸರಕಾರ ಸಾಕಷ್ಟು ಗಮನ ಹರಿಸಲಾಗುತ್ತಿದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸುವುದು ಅವಶ್ಯಕ.

# ಸೌಹಾರ್ದ ಸಹಕಾರಿಗಳ ಆಡಳಿತ ಪಾರದರ್ಶಕ, ಸದಸ್ಯಹಿತ ಹಾಗೂ ಸಮಾಜಮುಖಿಯಾಗಿರುವುದು ಅವಶ್ಯಕ

ಆತ್ಮೀಯ ಸಹಕಾರಿ ಬಂಧುಗಳಿಗೆ ಹೃದಯ ಪೂರ್ವಕ ನಮಸ್ಕಾರಗಳು ಹಾಗೂ ಮೊಹರಂ ಕೊನೆದಿನ ಹಾಗೂ ಗುರುಪೂರ್ಣಿಮದ ಶುಭಾಶಯಗಳು. ರಾಜ್ಯದಲ್ಲಿ 6300 ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಬಹುತೇಕ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇನ್ನೂ ಕೆಲ ಸಹಕಾರಿಗಳು ಆರ್ಥಿಕವಾಗಿ ಸದೃಡವಾಗಬೇಕಿರುತ್ತವೆ. ಆದರೆ ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಗತಿಯು ಸಹಕಾರಿಗಳ ಹಾಗೂ ಸರಕಾರದ ಗಮನ ಸೆಳೆಯುತ್ತಿರುವುದು ವಿಶೇಷ. ಈ ಕ್ಷೇತ್ರದಲ್ಲಿ ವಿಶೇಷವಾಗಿ ಯುವಕರು ಹೆಚ್ಚು ಆಸಕ್ತಿ ತೋರುತ್ತಿರುವುದು ಕ್ಷೇತ್ರದ ಪ್ರಗತಿಗೆ ಕಾರಣವೆಂದರೆ ತಪ್ಪಾಗಲಾರದು. ಈ ಕ್ಷೇತ್ರದ ಕಾರ್ಯಾಚರಣೆಯ ಬಗ್ಗೆ ಸರಕಾರ ಸಾಕಷ್ಟು ಗಮನ ಹರಿಸಲಾಗುತ್ತಿದೆ ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸುವುದು ಅವಶ್ಯಕ.

ಸೌಹಾರ್ದ ಸಹಕಾರಿಗಳಲ್ಲಿ ಪಾಲು ಬಂಡವಾಳ ಶೇಖರಣೆ, ಠೇವಣಿ ಸ್ವೀಕರಿಸುವುದು, ನಿಧಿಗಳ ಹೂಡಿಕೆ, ಸಾಲ ನೀಡಿಕೆ, ಸಾಲ ವಸೂಲಾತಿ, ಸಿಬ್ಬಂದಿ ನೇಮಕಾತಿ, ಆಡಳಿತ ಮಂಡಳಿ ಸಭೆಗಳು, ವಾರ್ಷಿಕ ಸಾಮಾನ್ಯ ಸಭೆ, ದೈನಂದಿನ ವ್ಯವಹಾರಗಳು, ಸಹಕಾರಿಯಲ್ಲಿ ನಗದು ಉಳಿಸಿಕೊಳ್ಳುವುದು ಅಧ್ಯಕ್ಷರ ಹಾಗೂ ನಿರ್ದೇಶಕರ ಕಾರ್ಯಚಟುವಟಿಕೆಗಳು ಇಂತಹ ಎಲ್ಲಾ ವ್ಯವಹಾರಗಳಲ್ಲಿ ಪಾರದರ್ಶಕತೆ ಅಗತ್ಯ. ಸೌಹಾರ್ದ ಸಹಕಾರಿಗಳು ಸದಸ್ಯರ ಹಣದಿಂದ ವ್ಯವಹಾರ ಮಾಡುತ್ತಿರುವುದರಿಂದ ಸದಸ್ಯರ ಹಣದ ಧರ್ಮದರ್ಶಿಯಂತೆ ಕಾರ್ಯನಿರ್ವಹಿಸುವುದು ಅತ್ಯವಶ್ಯಕ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಇರುವ ಸ್ವಾಯತ್ತತೆಯನ್ನು ಕೆಲವು ಸೌಹಾರ್ದ ಸಹಕಾರಿ ಸಂಸ್ಥೆಗಳು ಸ್ವೇಚ್ಛಾಚಾರಿಗಳಾಗಿ ಕಾರ್ಯನಿರ್ವಹಿಸಿ ಹಣ ದುರುಪಯೋಗ, ಸದಸ್ಯರ ಠೇವಣಿಗಳನ್ನು ಸಕಾಲದಲ್ಲಿ ಮರುಪಾವತಿ ಮಾಡದಿರುವುದು ಮತ್ತು ಆಡಳಿತ ಮಂಡಳಿಯವರೆ ಸಹಕಾರಿಯ ಠೇವಣಿಗಳನ್ನು ಬಹುಪಾಲು ಬಳಸಿಕೊಳ್ಳುತ್ತಿರುವುದನ್ನು ಸಂಯುಕ್ತ ಸಹಕಾರಿಯು ಕೈಗೊಂಡ ಪರಿವೀಕ್ಷಣಾ ಸಂದರ್ಭಗಳಲ್ಲಿ ಗಮನಿಸಲಾಗಿದೆ. ಅಂತಹ ಸೌಹಾರ್ದ ಸಹಕಾರಿಗಳ ಮೇಲೆ ಕಾಯ್ದೆಯ ಪರಿಮಿತಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಆದ್ದರಿಂದ ಆಡಳಿತದಲ್ಲಿ ಪಾರದರ್ಶಕತೆಯನ್ನು ಶೇಕಡಾ ನೂರಕ್ಕೆ ನೂರರಷ್ಟು ಪಾಲಿಸುವುದು ಅಗತ್ಯ ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಉತ್ತಮವಾಗುತ್ತದೆ.

ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಸಮಾಜಮುಖಿಯಾಗಿರುವುದು ಅವಶ್ಯಕ. ಸಹಕಾರಿ ತತ್ವಗಳು ಹಾಗೂ ಸಹಕಾರಿ ಮೌಲ್ಯಗಳ ಅಡಿಯಲ್ಲಿ "ಸಹಕಾರಿಗಳಿಂದ ಸಹಕಾರಿಗಳಿಗಾಗಿ ಹಾಗೂ ಸದಸ್ಯರಿಗೋಸ್ಕರವೇ" ಈ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಸಹಕಾರಿಯ ಎಲ್ಲಾ ಚಟುವಟಿಕೆಗಳು ಕಾನೂನು ಹಾಗೂ ಚೌಕಟ್ಟಿನಡಿಯಲ್ಲಿ ಸಮಾಜಮುಖಿಯಾಗಿ ಸದಸ್ಯ ಹಿತಕ್ಕಾಗಿಯೇ ಕಾರ್ಯನಿರ್ವಹಿಸುವುದು ಅಗತ್ಯ. ಸದಸ್ಯರ ಹಿತವೇ ಸಹಕಾರಿಯ ಹಿತ. ಸಮಾಜದಲ್ಲಿ ಸಹಕಾರಿಯನ್ನು ಗುರುತಿಸುವಂತಾಗಲು ಸೌಹಾರ್ದ ಸಹಕಾರಿಗಳು ಸಮಾಜಮುಖಿಯಾಗಿ ಕಾರ್ಯನಿರ್ವಹಿಸಬೇಕೇಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........ 2
ಸಂಪಾದಕೀಯ........ 3
ಜ್ಞಾನ ಜ್ಯೋತಿ........ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 05–19
ಸಂಯುಕ್ತ ಸಹಕಾರಿಯ ನೇಮಕಾತಿ ಪ್ರಕಟಣೆ ........ 20–23
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 30–33
**ಲೇಖನಗಳು :**
ನಾನು ಒಬ್ಬ ಬೆಳೆದರೆ ಆರ್ಥಿಕತೆ ಬೆಳವಣಿಗೆ, ಜೊತೆಯವರನ್ನು ಬೆಳೆಸಿದರೆ ಸಾರ್ಥಕತೆ ಭಾವ ........ 34, 36
ಸಾಧನೆಯ ಉರುಗೋಲು ........ 35–36
ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹಾಗೂ ನಿರ್ದೇಶಕರ ಪಾತ್ರ ........ 37–39

# ಸಂಪಾದಕೀಯ

## ಯುವಕರು ಹಾಗೂ ಸಹಕಾರ ಚಳುವಳಿ

ಪ್ರಸ್ತುತ ಕೇಂದ್ರ ಯುವ ಕ್ರೀಡಾ ಇಲಾಖೆಯ ಪ್ರಕಾರ ಈ ದೇಶದ ಜನಸಂಖ್ಯೆ ಹಾಲಿ 142 ಕೋಟಿ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಶೇಕಡಾ 66% ಯುವಜನ ಸಂಖ್ಯೆ ಇದೆ ಎಂದು ಅಂದಾಜು ಮಾಡಲಾಗಿದೆ. ರಾಷ್ಟ್ರೀಯ 14 ಜುಲೈ 2023ರ ರಾಷ್ಟ್ರೀಯ ಯುವ ನೀತಿ ಅಂದಾಜಿನ ಪ್ರಕಾರ ಈ ದೇಶದಲ್ಲಿ 37.14 ಕೋಟಿ ಯುವಕರಿದ್ದಾರೆ. ಭಾರತ ಇಂದು ಜನಸಂಖ್ಯೆಯಲ್ಲಿ ದೊಡ್ಡದು. ಯುವ ಜನಸಂಖ್ಯೆಯಲ್ಲಿಯೂ ದೊಡ್ಡದು. ಈ ಯುವ ಶಕ್ತಿಯನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಬೇಕು. ಯುವಕರಿಗೆ ಉದ್ಯೋಗ ಒದಗಿಸಬೇಕು. ಅವರ ಕತೃತ್ವ ಶಕ್ತಿಯನ್ನು ಕ್ರೀಯಾ ಶೀಲತೆಯನ್ನು ಹೆಚ್ಚಿಸಬೇಕು. ಇದು ಕೇಂದ್ರ ಹಾಗೂ ರಾಜ್ಯಗಳ ಆಡಳಿತಕ್ಕೆ ಒಂದು ಸವಾಲಿನಂತೆ ದೇಶದ ಪ್ರಗತಿ ಸಾಧನೆಯಲ್ಲಿ ಒಂದು ಉತ್ತಮ ಅವಕಾಶವೂ ಹೌದು.

ಯುವಕರನ್ನು ಸಹಕಾರ ಕ್ಷೇತ್ರಕ್ಕೆ ಬರಮಾಡಿಕೊಂಡು ಅವರ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆ ಮಹತ್ವದ ಪಾತ್ರವನ್ನು ನಿರ್ವಹಿಸಲು ಸಹಕಾರ ಕ್ಷೇತ್ರದಿಂದ ಸಾಧ್ಯ. ಯುವಕರ ಮನಸ್ಸಿನಲ್ಲಿ ಸಹಕಾರ ಚಳುವಳಿಯ ಸಾಂಪ್ರದಾಯಿಕತೆ ಜಾಡುಗಳಿವೆ. ಇದನ್ನು ಸರಕಾರ ಪೋಷಿಸುತ್ತದೆ. ಇದು ಹಿರಿಯರ ಕ್ಷೇತ್ರ. ಇದರಲ್ಲಿ ನಮಗೆ ಅವಕಾಶಗಳು ಕಡಿಮೆ. ಇದರಲ್ಲಿ ಪಟ್ಟ ಭದ್ರ ಹಿತಾಸಕ್ತಿಗಳ ಪಾತ್ರ ಹೆಚ್ಚಿಗೆ ಇದೆ. ಸರಕಾರದ ಹಸ್ತಕ್ಷೇಪವಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ನಮಗೆ ಭವಿಷ್ಯ ಇರುವುದಿಲ್ಲ ಇದರಿಂದ ನಮಗೆ ಏನು ಪ್ರಯೋಜನ ಇಲ್ಲ ಎಂಬ ಭಾವನೆ ಇದೆ. ಈ ಭಾವನೆಯನ್ನು ಹೋಗಲಾಡಿಸುವುದು ಸಧ್ಯದ ಸವಾಲು ನಮ್ಮ ಮೇಲಿದೆ.

ಯುವಕರಿಗೆ ಸಹಕಾರಿ ಕ್ಷೇತ್ರದ ಸಾಧನೆಗಳ ಬಗ್ಗೆ ಮಾಹಿತಿ ನೀಡುವುದು ಅವಶ್ಯಕ. ಈ ದೇಶದಲ್ಲಿ 31 ಕೋಟಿ ಜನರು ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರಿದ್ದಾರೆ. 8.5 ಲಕ್ಷದಷ್ಟು ವಿವಿಧ ಸಹಕಾರಿ ಸಂಸ್ಥೆಗಳಿವೆ. ಅಮೂಲ್, ಬಮೂಲ್, ಇಫ್ಕೋ, ಕ್ರಿಭ್ಕೋ, ಕ್ಯಾಮ್ಕೋ, ಮಾಮ್ಕೋದಂತಹ ಬೃಹತ್ ಸಹಕಾರಿ ಸಂಸ್ಥೆಗಳು, ವಿದೇಶಿ ಕಾರ್ಪೋರೇಟ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳು, ದೇಶ ವ್ಯಾಪಿ ಬೃಹತ್ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರೆಡಿಟ್ ಸಹಕಾರ ಸಂಘಗಳು ಈ ದೇಶ ಆಹಾರದಲ್ಲಿ ಸ್ವಾವಲಂಬನೆ ಸಾಧಿಸಲು ಕಾರಣವಾದ ಹಸಿರು ಕ್ರಾಂತಿಯ ಹರಿಕಾರನಾಗಿರುವ ಕೃಷಿ ಪತ್ತಿನ ಸಹಕಾರ ಸಂಘಗಳು, ಶ್ವೇತ ಕ್ರಾಂತಿಗೆ ಕಾರಣವಾಗಿ ರೈತರಿಗೆ ಕೃಷಿಗೆ ಪೂರಕವಾಗಿ ಹೈನುಗಾರಿಕೆಯನ್ನು ಪೋಷಿಸುತ್ತಿರುವ ಹಾಲು ಉತ್ಪಾದಕರ ಸಂಘಗಳು ಇವೆಲ್ಲವುಗಳಲ್ಲಿ ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸಿರುವುದು ಯುವಕರಿಗೆ ಮಾಹಿತಿ ಇರುವುದಿಲ್ಲ. ಹೀಗಾಗಿ ಯುವಕರು ಈ ಕ್ಷೇತ್ರದಿಂದ ದೂರ ಉಳಿದಿದ್ದಾರೆ.

ಯುವಕರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಳ್ಳುವ ದೃಷ್ಟಿಯಿಂದ ಸಂಯುಕ್ತ ಸಹಕಾರಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ವಿಶೇಷವಾಗಿ ಪದವಿ ಕಾಲೇಜುಗಳಲ್ಲಿ, ಸ್ನಾತಕೋತ್ತರ ಕೇಂದ್ರಗಳಲ್ಲಿ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಯುವಕರಿಗೆ ಉಪನ್ಯಾಸಗಳ ಮೂಲಕ ಹಾಗೂ ಸಂವಾದಗಳ ಮೂಲಕ ಮಾಹಿತಿಯನ್ನು ಒದಗಿಸಿ ಅವರು ಈ ಕ್ಷೇತ್ರಕ್ಕೆ ಬಂದು ಸಹಕಾರಿ ಕ್ಷೇತ್ರದ ಫಲಾನುಭವಿಗಳಾಗಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಹಾಗೂ ಒಕ್ಕೂಟ ಸಹಕಾರಿಗಳು ಕೈಜೋಡಿಸುವುದು ಅಗತ್ಯ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಪರಮಾರ್ಥ"

ಸಾಧನೆಯಲ್ಲಿ ಮೂರು ಭಾಗಗಳನ್ನು ಸಾಮಾನ್ಯವಾಗಿ ಮಾಡಲಾಗಿದೆ. ಲೌಕಿಕ, ಯೌಗಿಕ ಹಾಗೂ ಪಾರಮಾರ್ಥಿಕ. ಲೌಕಿಕ ಸಾಧನೆಯಿಂದ ಲೌಕಿಕ ಗಳಿಕೆ, ಯೌಗಿಕ ಸಾಧನೆಯಿಂದ ಯೌಗಿಕ ಗಳಿಕೆ ಹಾಗೂ ಪಾರಮಾರ್ಥಿಕ ಸಾಧನದಿಂದ ಪಾರಮಾರ್ಥಿಕ ಗಳಿಕೆ. ಸಾಧನೆಯಿಂದ ಪಡೆದದ್ದು 'ಅರ್ಥ' ಅಂದರೆ ಒಂದ ಬಗೆಯ ಸಂಪತ್ತು. ಅರ್ಥ ಎಂದರೆ ಯಾವುದು ನಮ್ಮ ಬಳಿ ಇದ್ದರೆ ನಮಗೆ ಶಕ್ತಿ, ನೆಮ್ಮದಿ, ಸುಖ ಸಿಗುತ್ತದೆಯೋ ಅದು. ಹಣ. ಮನೆ, ಶಕ್ತಿ, ಜನಬೆಂಬಲ, ಕೆಲಸ ಅಧಿಕಾರಗಳು ಮನುಷ್ಯನನ್ನು ಸಶಕ್ತಗೊಳಿಸುತ್ತವೆ. ಅದಿಲ್ಲದಿದ್ದರೆ ಮನುಷ್ಯ ಬರಿದಾಗುತ್ತಾನೆ. ಸಂಪತ್ತು ಎರಡು ರೀತಿಯದು: ಬಾಹ್ಯ ಹಾಗೂ ಆಂತರಿಕ. ಬಾಹ್ಯ ಸಂಪತ್ತು 'ಲೌಕಿಕ' ಕ್ಕೆ ಸಂಬಂಧಪಟ್ಟರೆ, ಆಂತರಿಕ ಸಂಪತ್ತು ಯೌಗಿಕ ಕ್ಕೆ ಸಂಬಂಧಿಸಿದ ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮರಂಥವರು ಆಂತರಿಕ ಸಂಪತ್ತು ಹೊಂದಿದ್ದರೆ. ಇನ್ನೂ ಪಾರಮಾರ್ಥಿಕ ಸಂಪತ್ತು ಕೈಗೆ ಸಿಗುವುದಿಲ್ಲ ಅದನ್ನು ಕಣ್ಣಿಂದ ನೋಡಲೂ ಬರುವುದಿಲ್ಲ.

ನಚಿಕೇತ ಒಬ್ಬ ಬಾಲಕ, ಆತ ಮನೆಯನ್ನು ಪಾಲಕರನ್ನು ತ್ಯಜಿಸಿ ಪರಮಾರ್ಥ ಸಾಧನೆಗಾಗಿ ಹೊರಟ. ಅವನು ಯಮಧರ್ಮರಾಜನ ಬಳಿಗೆ ಹೋದ. ನಚಿಕೇತ ಕೇಳಿದ, "ಗುರುಗಳೇ, ನನಗೆ ಪರಮಾರ್ಥ ಜ್ಞಾನ ಕೊಡಿ". ಧರ್ಮ ಕೇಳಿದ, "ಅದನ್ನು ತೆಗೆದುಕೊಂಡು ನೀನೇನು ಮಾಡುವೆ? ಬೇರೇನಾದರೂ ಕೇಳು. ರಾಜ್ಯ, ಅಧಿಕಾರ, ಸಂಪತ್ತು, ಐಶ್ವರ್ಯ, ಆಯಸ್ಸು ಏನೂ ಬೇಕಾದರೂ ಕೇಳು" ಎಂದ, ಆಗ ನಚಿಕೇತ, "ಏನೂನು ನೀನು ಕೊಡಬೇಕೆಂದು ಮಾಡಿರುವೆಯಲ್ಲಾ ಅವೆಲ್ಲ ನಿನ್ನ ಹತ್ತಿರವೇ ಇರಲಿ. ಯಾವುದನ್ನು ನೀನು ಕೊಡಲು ಬಯಸುತ್ತಿಲ್ಲವೋ ಅದನ್ನು ನನಗೆ ಕೊಡು" ಎಂದ. ಅದಕ್ಕೆ ಧರ್ಮ. "ಜಗತ್ತಿನ ಜನರು ಜೀವನಪರ್ಯಂತ ಯಾವುದಕ್ಕಾಗಿ ಕಷ್ಟಪಡುತ್ತಾರೋ ಅದನ್ನು ಕೇಳು. ಪರಮಾರ್ಥದಿಂದೇನು ಲಾಭ?" ಹೀಗೆ ಇನ್ನೂ ಅನೇಕ ರೀತಿಯ ಆಸೆಗಳನ್ನು ಧರ್ಮ ನಚಿಕೇತನಿಗೆ ತೋರಿಸಿದ. ಆದರೂ ನಚಿಕೇತ ಅವವಕ್ಕೂ ಒಪ್ಪಲಿಲ್ಲ. ಧರ್ಮಹೇಳಿದ, "ನನಗಿಂದು ಬಹಳ ಸಂತಸವಾಗಿದೆ. ಯಾರೂ ಬಯಸದ್ದನ್ನು ನೀನು ಬಯಸಿರುವೆಯಲ್ಲ ನಾನು ನಿನಗೆ ಅದನ್ನು ಕಾಡುತ್ತೇನೆ" ಎಂದು ನಚಿಕೇತನನ್ನು ಹರಿಸಿದ.

ಪರಮಾರ್ಥ ಜಗತ್ತಿನ ಎಲ್ಲ ಸಂಪತ್ತನ್ನೂ ಮೀರಿಸುತ್ತದೆ. ಲೌಕಿಕ ಹಾಗೂ ಯೌಗಿಕ ಸಂಪತ್ತುಗಳು ಈ ಸಂಪತ್ತಿಗೆ ಸಮನಾಗಿ ನಿಲ್ಲವು. ಪರಮ (ಶ್ರೇಷ್ಠ) + ಅರ್ಥ (ಸಂಪತ್ತು) = ಪರಮಾಥ. ಈ ಸಂಪತ್ತು ಕಣ್ಣಿಗೆ ಕಾಣುವುದಿಲ್ಲ. ಕೈಗೆ ನಿಲುಕುವುದಿಲ್ಲ. ತುಕಾರಾಮನ ಬಳಿ ಶಿವಾಜಿ ಮಹಾರಾಜ ಒಂದಿಷ್ಟು ಸಂಪತ್ತು ಕಳಿಸಿದ. ಆಗ ತುಕಾರಾಮ, "ನನ್ನಷ್ಟು ಸಿರಿವಂತರು ಈ ಜಗತ್ತಿನಲ್ಲಿ ಯಾರು ಇಲ್ಲ. ಹೋಗಿ ಶಿವಾಜಿಗೆ ಹೇಳಿರಿ" ಎಂದು ಅದನ್ನು ತಂದವರಿಗೆ ಹೇಳಿದ. ತುಕಾರಾಮನ ಬಳಿ ಇದ್ದದ್ದು ಆಂತರಿಕ ಸಂಪತ್ತು. ಅದು ಅದ್ಭುತ. ಅದೇ ಪರಮಾರ್ಥ.

ಯಾವುದನ್ನು ಪಡೆಯುವುದರಿಂದ ಮನಸ್ಸಿನ ಬಯಕೆಗಳೆಲ್ಲ ಅಡಗಿ ಮನಸ್ಸು ಶಾಂತ, ನಿಶ್ಚಿಂತವಾಗುತ್ತದೆಯೋ ಅದೇ ಪರಮಾರ್ಥ. ಅದು ಶಾಶ್ವತವಾಗಿರುತ್ತದೆ. ಲೌಕಿಕ ಹಾಗೂ ಯೌಗಿಕ ಸಂಪತ್ತುಗಳು ಸವೆಯುತ್ತವೆ. ಆದರೆ ಪಾರಮಾರ್ಥಿಕ ಸಂಪತ್ತು ಹಾಗಲ್ಲ. ದೇಹ ಅಳಿಯುತ್ತದೆ. ಸಂಪತ್ತು ಕರಗುತ್ತದೆ ಆದ್ದರಿಂದ ಅವು ಸಾಮಾನ್ಯ ಸಂಪತ್ತು. ಪರಮಾರ್ಥ ಎಂದರೆ ದೇವರು. ಅದನ್ನು ಎಣಿಸಲು ಬರುವುದಿಲ್ಲ. ಒಂದು ವೃತ್ತದ ಮೌಲ್ಯ 360 ಡಿಗ್ರಿ ವೃತ್ತದ ತ್ರಿಜ್ಯವನ್ನು ಬದಲಿಸಿದರೂ. ಅದು ಎಷ್ಟು ದೊಡ್ಡದಾದರೂ ಅಥವಾ ಚಿಕ್ಕದಾದರೂ ಅದರ ಮೌಲ್ಯ ಸ್ಥಿರ ಅದರು 360 ಡಿಗ್ರಿ, ಹಾಗೆಯೇ ಪರಮಾರ್ಥದ ಮೌಲ್ಯ. ಅದು ಒಳಗಿರುವ ವಸ್ತು. ಹೊರಗಿನಿಂದ ಬರುವುದಿಲ್ಲ. ಎಲ್ಲವೂ ಅದರಿಮದ ನಡೆಯುತ್ತದೆ. ಅದಕ್ಕೆ ಯಾರೂ ಬೇಕಾಗುವುದಿಲ್ಲ. ಒಂದು ಕಪ್ಪುಹಲಗೆ ಮೇಲೆ ಅಂಕಿಗಳನ್ನು ಭಿನ್ನಭಿನ್ನವಾಗಿ ಬರೆಯಬಹುದು. ಆದರೆ ಕಪ್ಪುಹಲಗೆ ಮಾತ್ರ ಒಂದೇ, ಕಪ್ಪುಹಲಗೆ ಎಂದರೆ ಇಲ್ಲಿ ಆತ್ಮ. ಅನೇಕ ವಿಚಾರಗಳು ಬರುತ್ತವೆ ಹೋಗುತ್ತವೆ. ಆದರೆ ಆತ್ಮ ಮಾತ್ರ ಸ್ಥಿರ.

**ಅಕ್ಕಮಹಾದೇವಿ ಹೇಳುತ್ತಾಳೆ:**

**"ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವಘೋರಾರಣ್ಯ, ಕದಳಿ ಬನಹೊಕ್ಕು ಭವಹರನ ಕಂಡೆನು ಭವಗೆಟ್ಟ ಮಗಳೆಂದು ಕರುಣದಿಂ ತೆಗೆದು ಬಿಗಿದಪ್ಪಿದರೆ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು."**

ಲೌಕಿಕ ಸಂಪತ್ತನ್ನು ಪಡೆಯಬಾರದೆಂದೇನಿಲ್ಲ. ಆದರೆ ಅದು ಹೋಗುತ್ತದೆ ಎಂಬುದು ತಿಳಿದಿರಬೇಕು. ಪರಮಾರ್ಥ ಕಾಲವನ್ನೂ ಮೀರಿದ್ದು, ಅದು ಅನಂತ ವಸ್ತು. ಪರಮಾರ್ಥ ಕಾಲವನ್ನೂ ನಿಲ್ಲಿಸುತ್ತದೆ. ಅಕ್ಕಮಹಾದೇವಿ ಹೇಳುವಂತೆ ಈ ಪ್ರಪಂಚ ಒಂದು ಘೋರ ಅರಣ್ಯ ಅದರ ಒಳಗೆ ಹೋದರೆ ಹೊರಬರಲು ಆಗುವುದಿಲ್ಲ. ಅಷ್ಟು ಆಕರ್ಷಣೆ ಅದರಲ್ಲಿದೆ. ಆದರೆ ನಾನು ಅದನ್ನು ಗೆದ್ದು ಬಂದೆ, ಶಾಂತ ಮನಸ್ಸಿನಲ್ಲಿ ಚನ್ನಮಲ್ಲಿಕಾರ್ಜುನನನ್ನು ಕಂಡೆ. ಆತ್ಮ ದರ್ಶನವಾಯಿತು. ಆಗ ನಾನು ಎನ್ನುವುದು ಹೋಗಿ ನಾನೇ ದೇವನಾದೆ. ಇದು ಪರಮಾರ್ಥ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು ಒಟ್ಟು 35,949 ಆಗಿರುತ್ತದೆ. ಇವುಗಳ ಪೈಕಿ 28,127 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7822

**ಜೂನ್ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 1153 ಇತ್ಯರ್ಥಗೊಂಡ ಪ್ರಕರಣಗಳು 1,296

**ಅಮಲ್ಜಾರಿ ಪ್ರಕರಣಗಳು :** ಒಟ್ಟು 9,518 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,735 ಪ್ರಕರಣಗಳು ಇತ್ಯರ್ಥಗೊಂಡಿದ್ದು, 7,783 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜೂನ್ ತಿಂಗಳಿನಲ್ಲಿ ಒಟ್ಟು 113 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

## ರಾಜ್ಯದಿಂದ ನೂತನವಾಗಿ ಆಯ್ಕೆಯಾಗಿರುವ ಸಚಿವರುಗಳಿಗೆ ಹಾಗೂ ಸಂಸದರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.


ಶ್ರೀ ಹೆಚ್.ಡಿ ಕುಮಾರಸ್ವಾಮಿ
ಸಚಿವರು, ಮಂಡ್ಯ ಕ್ಷೇತ್ರ


ಶ್ರೀ ಪ್ರಲ್ಹಾದ ಜೋಶಿ
ಸಚಿವರು, ಧಾರವಾಡ ಕ್ಷೇತ್ರ


ಕು. ಶೋಭಾ ಕರಂದ್ಲಾಜೆ
ಸಚಿವರು, ಬೆಂಗಳೂರು ಉತ್ತರ ಕ್ಷೇತ್ರ


ಶ್ರೀ ವಿ. ಸೋಮಣ್ಣ
ಸಚಿವರು, ತುಮಕೂರು ಕ್ಷೇತ್ರ


ಶ್ರೀ ಬಸವರಾಜ ಬೊಮ್ಮಾಯಿ
ಹಾವೇರಿ ಕ್ಷೇತ್ರ


ಶ್ರೀ ಜಗದೀಶ್ ಶೆಟ್ಟರ್
ಬೆಳಗಾವಿ ಕ್ಷೇತ್ರ


ಶ್ರೀ ರಮೇಶ ಜಿಗಜಿಣಗಿ
ವಿಜಯಪುರ ಕ್ಷೇತ್ರ


ಶ್ರೀ ಪಿ.ಸಿ ಗದ್ದಿಗೌಡರ್
ಬಾಗಲಕೋಟೆ ಕ್ಷೇತ್ರ


ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ
ಉತ್ತರ ಕನ್ನಡ ಕ್ಷೇತ್ರ


ಶ್ರೀ ಪಿ.ಸಿ ಮೋಹನ್
ಬೆಂಗಳೂರು ಕೇಂದ್ರ ಕ್ಷೇತ್ರ


ಶ್ರೀ ಬಿ.ವೈ ರಾಘವೇಂದ್ರ
ಶಿವಮೊಗ್ಗ ಕ್ಷೇತ್ರ


ಶ್ರೀ ಗೋವಿಂದ ಕಾರಜೋಳ
ಚಿತ್ರದುರ್ಗ ಕ್ಷೇತ್ರ


ಶ್ರೀ ತೇಜಸ್ವಿ ಸೂರ್ಯ
ಬೆಂಗಳೂರು ದಕ್ಷಿಣ ಕ್ಷೇತ್ರ


ಡಾ. ಕೆ. ಸುಧಾಕರ್
ಚಿಕ್ಕಬಳ್ಳಾಪುರ ಕ್ಷೇತ್ರ


ಶ್ರೀ ಈ. ತುಕಾರಾಂ
ಬಳ್ಳಾರಿ ಕ್ಷೇತ್ರ


ಶ್ರೀ ರಾಧಾಕೃಷ್ಣ ದೊಡ್ಡಮನಿ
ಕಲಬುರಗಿ ಕ್ಷೇತ್ರ


ಡಾ. ಸಿ.ಎನ್ ಮಂಜುನಾಥ್
ಬೆಂಗಳೂರು ಗ್ರಾಮಂತರ ಕ್ಷೇತ್ರ


ಶ್ರೀ ರಾಜಶೇಖರ ಹಿಟ್ನಾಳ
ಕೊಪ್ಪಳ ಕ್ಷೇತ್ರ


ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ
ಉಡುಪಿ–ಚಿಕ್ಕಮಗಳೂರು ಕ್ಷೇತ್ರ


ಶ್ರೀ ಜಿ. ಕುಮಾರ್ ನಾಯ್ಕ
ರಾಯಚೂರು ಕ್ಷೇತ್ರ


ಡಾ. ಪ್ರಭಾ ಮಲ್ಲಿಕಾರ್ಜುನ
ದಾವಣಗೆರೆ ಕ್ಷೇತ್ರ


ಶ್ರೀ ಎಂ. ಶ್ರೇಯಸ್ ಪಟೇಲ್
ಹಾಸನ ಕ್ಷೇತ್ರ


ಕ್ಯಾ. ಬ್ರಿಜೇಶ್ ಚೌಟ
ದಕ್ಷಿಣ ಕನ್ನಡ ಕ್ಷೇತ್ರ


ಶ್ರೀ ಯದುವೀರ್ ಒಡೆಯರ್
ಮೈಸೂರು ಕೊಡಗು ಕ್ಷೇತ್ರ




ಶ್ರೀ ಜಿ. ಸುನೀಲ್ ಬೋಸ್
ಚಾಮರಾಜನಗರ ಕ್ಷೇತ್ರ


ಶ್ರೀ ಎಂ. ಮಲ್ಲೇಶ್ ಬಾಬು
ಕೋಲಾರ ಕ್ಷೇತ್ರ


ಕು. ಪ್ರಿಯಾಂಕಾ ಜಾರಕಿಹೊಳಿ
ಚಿಕ್ಕೋಡಿ ಕ್ಷೇತ್ರ


ಶ್ರೀ ಸಾಗರ ಈಶ್ವರ ಖಂಡ್ರೆ
ಬೀದರ ಕ್ಷೇತ್ರ



## 102ನೇ ಅಂತರರಾಷ್ಟ್ರೀಯ ಸಹಕಾರ ದಿನ - 06ನೇ ಜುಲೈ 2024

### 2024 ಧ್ಯೇಯ – "ಸಹಕಾರಿ ಸಂಸ್ಥೆಗಳು ಉತ್ತಮ ಭವಿಷ್ಯವನ್ನು ನಿರ್ಮಾಣ ಮಾಡುತ್ತವೆ"

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳು ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡುತ್ತ ಬಂದಿದ್ದಾರೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಸಹಕಾರಿ ಸಂಸ್ಥೆಗಳು ಉತ್ತಮ ಭವಿಷ್ಯವನ್ನು ನಿರ್ಮಾಣ ಮಾಡುತ್ತವೆ" ಎಂಬುದನ್ನು ದೃಢೀಕರಿಸಲು ಈ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

**International Day of Cooperatives 2024**
**Theme : Cooperatives Build a Better Future for All**

## ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಹಕಾರ ಸಂಘಗಳ ಕಾಯ್ದೆ ತಿದ್ದುಪಡಿ ಸಮಿತಿ ಸಭೆ



**ಬೆಂಗಳೂರು** : ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಹಕಾರ ಸಂಘಗಳ ಕಾಯಿದೆ ತಿದ್ದುಪಡಿ ಸಮಿತಿ ಸಭೆಯು ಶಾಸಕರು ಹಾಗೂ ಸಮಿತಿ ಅಧ್ಯಕ್ಷರಾದ ಲಕ್ಷ್ಮಣ ಸಂಗಪ್ಪ ಸವದಿ ಅವರ ಅಧ್ಯಕ್ಷತೆಯಲ್ಲಿ, ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ಅವರ ಉಪಸ್ಥಿತಿಯಲ್ಲಿ ನಡೆಯಿತು.

ಸಭೆಯಲ್ಲಿ ಸಮಿತಿ ಸದಸ್ಯರುಗಳು ಹಾಗೂ ಶಾಸಕರಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಶಿವರಾಮ್ ಅರಬೈಲ್ ಹೆಬ್ಬಾರ್, ಶ್ರೀ ಕೆ. ಷಡಕ್ಷರಿ, ಮಾಜಿ ಸಚಿವರಾದ ಶ್ರೀ ಎಸ್.ಆರ್. ಪಾಟೀಲ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಡಾ. ಎಂ.ಎನ್. ರಾಜೇಂದ್ರಕುಮಾರ್, ಸಹಕಾರ ಇಲಾಖೆ ಕಾರ್ಯದರ್ಶಿಗಳಾದ ಡಾ. ಎಂ. ಎನ್. ಅಜಯ್ ನಾಗಭೂಷಣ್, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ, ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿ ಶ್ರೀ ಎ.ಸಿ. ದಿವಾಕರ್, ನಿವೃತ್ತ ಅಪರ ನಿಬಂಧಕರುಗಳಾದ ಶ್ರೀ ರಮಣರೆಡ್ಡಿ, ಶ್ರೀ ಎಚ್.ಎಸ್. ನಾಗರಾಜಯ್ಯ, ಅಪರ ನಿಬಂಧಕರುಗಳಾದ ಶ್ರೀ ಕೆ.ಎಸ್. ನವೀನ್, ಶ್ರೀ ಜಿ.ಎಂ. ರವೀಂದ್ರ, ಜಂಟಿ ನಿಬಂಧಕರುಗಳಾದ ಶ್ರೀ ಕಲ್ಲಪ್ಪ ಓಬಣ್ಣಗೋಳ, ಶ್ರೀ ನೀಲಪ್ಪ ಸಿದ್ದಣ್ಣನವರ್, ಶ್ರೀ ಲಕ್ಷ್ಮೀಪತಯ್ಯ, ಶ್ರೀ ಪಿ. ಮಹೇಶ್ ಅವರುಗಳು ಸೇರಿದಂತೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ದಿನಾಂಕ 8 ಹಾಗೂ 9 ಜುಲೈ 2024 ರಂದು ಬೆಳಗಾವಿ ವಿಭಾಗದ 40 ಕೋಟಿಗೂ ಅಧಿಕ ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳಿಗಾಗಿ ಉನ್ನತ ಮಟ್ಟದ ತರಬೇತಿಯನ್ನು ಹೋಟೆಲ್ ರಾಯಲ್ ರಿಟ್ಜ್, ಹುಬ್ಬಳ್ಳಿಯಲ್ಲಿ ಆಯೋಜಿಸಲಾಗಿದೆ.
2. ದಿನಾಂಕ 30.07.2024 ರಿಂದ 03.08.2024 ರವರೆಗೆ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 5 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
3. ದಿನಾಂಕ 26 ಹಾಗೂ 27 ಜುಲೈ 2024 ರಂದು ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ತರಬೇತಿ 3ನೇ ತಂಡದ ಕಾರ್ಯಕ್ರಮವನ್ನು ಸೌಹಾರ್ದ ಸಹಕಾರಿ ಸೌಧ ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.
4. ಜುಲೈ ಮತ್ತು ಆಗಸ್ಟ್ ಮಾಹೆಯಲ್ಲಿ ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯಗಳಲ್ಲಿ ಹಮ್ಮಿಕೊಳ್ಳಲಾಗುವುದು.

# ಸಂಯುಕ್ತ ಸಹಕಾರಿಯ 23ನೇ ವಾರ್ಷಿಕ ಸಾಮಾನ್ಯ ಸಭೆ
## 23ನೇ ಆಗಸ್ಟ್ 2024

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 23ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 23 ಆಗಸ್ಟ್ 2024, ಶುಕ್ರವಾರದಂದು ಪ್ರಿನ್ಸೆಸ್ ಗಾಲ್ಫ್, ಗೇಟ್ ಸಂಖ್ಯೆ-09, ಅರಮನೆ ಮೈದಾನ, ರಮಣ ಮಹರ್ಷಿ ರಸ್ತೆ (ಬಳ್ಳಾರಿ ರಸ್ತೆ), ಬೆಂಗಳೂರು–560080 ಇಲ್ಲಿ ಬೆಳಿಗ್ಗೆ 10:00 ಗಂಟೆಗೆ ಕರೆಯಲಾಗಿದೆ. ಸಭೆಯ ನೋಟೀಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಕಳುಹಿಸಲಾಗುವುದು.

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮ ಸಹಕಾರಿಯ ಮಂಡಳಿ ಸಭೆಯಲ್ಲಿ ನಿರ್ಣಯಿಸುವ ಮೂಲಕ ಓರ್ವ ಚುನಾಯಿತ ನಿರ್ದೇಶಕರನ್ನು ಡೆಲಿಗೇಟ್ ಆಗಿ ಭಾಗವಹಿಸಲು ನಿಯೋಜಿಸಬಹುದು. ಅಂತಹ ನಿರ್ದೇಶಕರು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ತನ್ನ ಸಹಕಾರಿಯ ಆಡಳಿತ ಮಂಡಳಿ ಸಭೆಯ ನಿರ್ಣಯ ಹಾಗೂ ಸೂಕ್ತವಾಗಿ ಭರ್ತಿ ಮಾಡಲ್ಪಟ್ಟ ನಮೂನೆಯೊಂದಿಗೆ ಹಾಜರಾಗುವುದು. ನಮೂನೆಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಲಭ್ಯವಿರುತ್ತದೆ.

ಸಭೆಯ ನಂತರ ಶ್ರೀ ಯಶವಂತ ಡೋಂಗ್ರೆ ಯವರ Autonomy Governance and Empowement ಪುಸ್ತಕ ಹಾಗೂ ಶ್ರೀ ಶಶಿಧರ ಎಲೆ ಇವರ ಸಹಕಾರ ಅವಲೋಕನಾ ಪುಸ್ತಕ ಬಿಡುಗಡೆ ಕಾರ್ಯಕ್ರಮ, ಡಿ.ಸಿ.ಬಿ.ಎಂ ಮೊದಲನೇ ತಂಡದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮತ್ತು 5 ಉತ್ತಮ ಸಹಕಾರಿ ಸಂಸ್ಥೆ ಹಾಗೂ ಶ್ರೇಷ್ಠ ಸಹಕಾರಿ ವ್ಯಕ್ತಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಈ ಸಭಾಂಗಣದ ಆವರಣದಲ್ಲಿ ತಾಂತ್ರಿಕ ಮೇಳ ಹಾಗೂ ಸೌಹಾರ್ದ ಸಹಕಾರಿಗಳ ಉತ್ಪಾದಿತ ವಸ್ತುಗಳ ಮಾರಾಟ ಹಾಗೂ ಪ್ರದರ್ಶನಿಯನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಆಸಕ್ತರು ಸಂಯುಕ್ತ ಸಹಕಾರಿಯ ಅಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಮಳಿಗೆಯನ್ನು ಕಾಯ್ದಿರಿಸಿಕೊಳ್ಳಲು ಕ್ರಮವಿಡುವುದು.

## 7 ದಿನಗಳ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್-2024
### 8ನೇ ತಂಡ ದಿನಾಂಕ : 10.06.2024 ರಿಂದ 16.06.2024 ರವರೆಗೆ



**ಹರಿಹರ** : ದಿನಾಂಕ 10–06–2024 ರಂದು ಕಿರ್ಲೋಸ್ಕರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (KIM), ಯಂತ್ರಪುರ, ಹರಿಹರ, ದಾವಣಗೆರೆ ಜಿಲ್ಲೆ ಇಲ್ಲಿ 7 ದಿನಗಳ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಈ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್ ಪ್ರಭುದೇವ್ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಸುರೇಂದ್ರ, ಸಹಕಾರ ಅಭಿವೃದ್ಧಿ ಅಧಿಕಾರಿ, ದಾವಣಗೆರೆ, ಶ್ರೀ ಡಾ. ನಂದೀಶ್ ಹಿರೇಮಠ್, ನಿರ್ದೇಶಕರು ಕಿರ್ಲೋಸ್ಕರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಇವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ಶ್ರೀ ವಿ.ಜೆ ಕಾರಕೂನ ರವರು, ಶ್ರೀ ಶಿವಕುಮಾರ ಬಿರಾದಾರ ರವರು, ಶ್ರೀ ವಿಶ್ವನಾಥ್ ಎಂ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ರವರು ಹಾಗೂ KIM ನ ಪ್ರಮುಖರು ಮತ್ತು 54 ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ಸಮಾರೋಪ ಕಾರ್ಯಕ್ರಮ



ದಿನಾಂಕ: 16–06–2024 ರಂದು ಕಿರ್ಲೋಸ್ಕರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಯಂತ್ರಪುರ, ಹರಿಹರ, ದಾವಣಗೆರೆ ಜಿಲ್ಲೆ ಇಲ್ಲಿ 7 ದಿನಗಳ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಅಯೋಜಿಸಲಾಗಿರುವ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ತರಬೇತಿಯ ಸಮಾರೋಪ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 7 ದಿನಗಳ ತರಬೇತಿಯ ವಿವರಣೆಯನ್ನು ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರ ಇವರು ತಿಳಿಸಿಕೊಟ್ಟರು. ಸಮಾರೋಪ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನ ಕುಮಾರ್ ಇವರು ನೆರವೇರಿಸಿದರು. ಈ ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್ ಪ್ರಭುದೇವ್ ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ ರವರು, ಡೀನ್, ಸ್ಕೂಲ್ ಆಫ್ ಕಾಮರ್ಸ್ & ಮ್ಯಾನೇಜ್ಮೆಂಟ್, ದಾವಣಗೆರೆ ವಿಶ್ವವಿದ್ಯಾಲಯದ ಶ್ರೀ ಡಾ. ಆರ್ ಶಶಿಧರ್ ರವರು, ಕಿರ್ಲೋಸ್ಕರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ನ ನಿರ್ದೇಶಕರಾದ ಶ್ರೀ ಡಾ. ನಂದೀಶ್ ಹೀರೆಮಠ, ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ವಿಭಾಗದ ಶ್ರೀ ವಿ.ಜೆ ಕಾರಕೂನ ರವರು, ಶ್ರೀ ಶಿವಕುಮಾರ ಬಿರಾದಾರ ರವರು ತರಬೇತಿ ವಿಭಾಗದ ಹಿರಿಯ ವ್ಯವಸ್ಥಾಪಕರು ಹಾಗೂ ತರಬೇತಿ ವಿಭಾಗದ ಸಹಾಯಕರಾದ ಶ್ರೀ ವಿಶ್ವನಾಥ ಎಂ ಹಾಗೂ ಶ್ರೀ ರಾಕೇಶ್ ಎ ರವರು ಉಪಸ್ಥಿತರಿದ್ದರು 05 ಬ್ಯಾಂಕುಗಳಿಂದ 54 ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

**ಬಹುಮಾನ ವಿಜೇತ ತಂಡಗಳ ಮತ್ತು ಶಿಬಿರಾರ್ಥಿಗಳ ಪಟ್ಟಿ :**

1. ಉತ್ತಮ ವ್ಯವಸ್ಥಾಪನ ತಂಡ – **ಹರಿಹರೇಶ್ವರ**
2. ಉತ್ತಮ ತಂಡ – **ಸಹ್ಯಾದ್ರಿ**
4. ಉತ್ತಮ ಸಾಂಸ್ಕೃತಿಕ ತಂಡ – **ಅಯೋಧ್ಯ**
5. ಉತ್ತಮ ವರದಿ ತಂಡ – **ರಾಷ್ಟ್ರಕೂಟ**
6. ಉತ್ತಮ ಪ್ರಾರ್ಥನೆ – **ಕುಮಾರಿ ಹರಿಪ್ರಿಯ**
7. ಉತ್ತಮ ಸುವಿಚಾರ – **ಕುಮಾರಿ ಸುಷ್ಮ ಎಂ. ಹೆಚ್.**
8. ಉತ್ತಮ ಮಿಲಿ – **ಶ್ರೀಮತಿ ಅಶ್ವಿನಿ ಎಂ.**
9. ಉತ್ತಮ Instant ಮಿಲಿ – **ಕುಮಾರಿ ಶಾಂತಕುಮಾರಿ**
10. ಉತ್ತಮ ಮಹಿಳಾ ಶಿಬಿರಾರ್ಥಿ – **ಶ್ರೀಮತಿ ಇಂಧು ಶ್ರೀ**
11. ಉತ್ತಮ ಪುರುಷ ಶಿಬಿರಾರ್ಥಿ – **ಶ್ರೀ ಅಭೀಷೇಕ್**
12. ಪರೀಕ್ಷೆಯಲ್ಲಿ ಪ್ರಥಮ ಬಹುಮಾನ – **ಶ್ರೀಮತಿ ಇಂಧು ಶ್ರೀ**
13. ಪರೀಕ್ಷೆಯಲ್ಲಿ ದ್ವಿತೀಯ ಬಹುಮಾನ – **ಶ್ರೀ ವಿನಾಯಕ**
14. ಪರೀಕ್ಷೆಯಲ್ಲಿ ತೃತೀಯ ಬಹುಮಾನ – **ಶ್ರೀಮತಿ ಅಶ್ವಿನಿ ಎನ್**
15. ಪರೀಕ್ಷೆಯಲ್ಲಿ ಸಮಾಧಾನಕರ ಬಹುಮಾನ – **ಶ್ರೀ ಕೃಷ್ಣ ಕೊಂಕತಿ, ಶ್ರೀ ಪಂಪನಗೌಡ ಶಿವನಗೌಡ, ಶ್ರೀ ಜಗದೀಶ**
16. ರಸಮಂಜರಿಯ ಉತ್ತಮ ಗಾಯಕರು – **ಶ್ರೀ ಶರಣಬಸವ, ಶ್ರೀ ಸತೀಶ್**



ಯೋಗ ತರಬೇತಿ



ಪ್ರಮಾಣ ಪತ್ರ ವಿತರಣೆ



ಅತಿಥಿ ಗಣ್ಯರೊಂದಿಗೆ 8ನೇ ತಂಡದ ಶಿಬಿರಾರ್ಥಿಗಳು

---



**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 20 ಜೂನ 2024 ರಂದು ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಾರಾಟಾಧಿಕಾ–ರಿಗಳಿಗೆ ವಿಷಯಾಧಾರಿತ ತರಬೇತಿಯನ್ನು ತರಬೇತಿ ಸಭಾಂಗಣ, ಪ್ರಾಂತೀಯ ಕಛೇರಿ, ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ವಸೂಲಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಪ್ರೇಮಾನಂದ ಬಿ.ಪಿ ನೆರವೇರಿಸಿದರು. ಪ್ರಾಸ್ತಾವಿಕವಾಗಿ ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು ಮಾತನಾಡಿದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ "ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ"



ಉದ್ಘಾಟನೆ



ಇಫ್ಕೋ ಸಂಸ್ಥೆಯ ರಾಜ್ಯ ಮಾರಾಟ ವ್ಯವಸ್ಥಾಪಕರಾದ ಶ್ರೀ ಸಿ. ನಾರಾಯಣಸ್ವಾಮಿಯವರಿಗೆ ಸನ್ಮಾನ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ದಿನಾಂಕ 12 ಹಾಗೂ 13ನೇ ಜೂನ್ 2024 ರಂದು ಎರಡು ದಿನಗಳಂದು, "ಆಡಳಿತ ಪರಿಣಿತಿ ಹಾಗೂ ವ್ಯವಹಾರ ಅಭಿವೃದ್ಧಿ ತರಬೇತಿ" ಕಾರ್ಯಕ್ರಮವನ್ನು 'ಸೌಹಾರ್ದ ಸಹಕಾರಿ ಸೌಧ' 18ನೇ ಅಡ್ಡ ರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು.

ಸದರಿ ತರಬೇತಿಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ, ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಇವರು ವಹಿಸಿದ್ದರು. ಸದರಿ ತರಬೇತಿಯ ಉದ್ಘಾಟನೆಯನ್ನು ಮಾನ್ಯ ಇಫ್ಕೋ ಸಂಸ್ಥೆ, ಬೆಂಗಳೂರು ಪ್ರಾಂತೀಯ ಕಛೇರಿಯ ಮಾನ್ಯ ರಾಜ್ಯ ಮಾರಾಟ ವ್ಯವಸ್ಥಾಪಕರಾದ ಶ್ರೀ ಸಿ. ನಾರಾಯಣ ಸ್ವಾಮಿಯವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಉಪಸ್ಥಿತರಿದ್ದರು.

ತರಬೇತಿ ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ತಿಳಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ್ ರವರು ಸ್ವಾಗತವನ್ನು ಕೋರಿದರು. ಶ್ರೀಮತಿ ದಿವ್ಯ ಟಿ. ರವರು ಕಾರ್ಯಕ್ರಮದ ಪ್ರಾರ್ಥನೆಯನ್ನು ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಡಾ. ಸಿ. ನಾರಾಯಣಸ್ವಾಮಿ ಮಾನ್ಯ ರಾಜ್ಯ ಮಾರಾಟ ವ್ಯವಸ್ಥಾಪಕರು, ಇಫ್ಕೋ ಇವರಿಗೆ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ತರಬೇತಿಯಲ್ಲಿ 12 ಜಿಲ್ಲೆಯಿಂದ 45 ಸೌಹಾರ್ದ ಸಹಕಾರಿಗಳಿಂದ 86 ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಮೊದಲನೇ ಅವಧಿಯನ್ನು ಶ್ರೀ ಶ್ರೀಕಾಂತ ಬರುವೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಮ್ಯಾಮ್ ಕೋಸ್, ಶಿವಮೊಗ್ಗ ಇವರು ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ಕಾಯ್ದೆಯ ಮತ್ತು ಇತ್ತೀಚಿನ ಪ್ರಮುಖ ಅಂಶಗಳು. ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಎರಡನೇ ಅವಧಿಯನ್ನು ಶ್ರೀ ಹೆಚ್.ಎಸ್. ನಾಗರಾಜಯ್ಯ ಮಾನ್ಯ ಅಪರ ನಿಬಂಧಕರು (ನಿ.), ಬೆಂಗಳೂರು ಇವರು ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಮತ್ತು ನಿರ್ದೇಶಕರ ಪಾತ್ರ. ವಿಷಯದ ಬಗ್ಗೆ ತರಬೇತಿ ನಡೆಸಿಕೊಟ್ಟರು.

ಮೂರನೇ ಅವಧಿಯನ್ನು ಶ್ರೀಮತಿ ಮೀನಾಕ್ಷಿ ಖಂಡಿಮಠ ಮಾನ್ಯ ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು. ಇವರು ಆಂತರಿಕ ಸಂಬಂಧಗಳ ನಿರ್ವಹಣೆ ಹಾಗೂ ಮಾನವೀಯ ಮೌಲ್ಯಗಳು. ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಎರಡನೇ ದಿನದ ಮೊದಲನೇ ಅವದಿಯನ್ನು ಡಾ. ನಂದೀಶ ವಿ. ಹಿರೇಮಠ ಮಾನ್ಯ ಕಾರ್ಪೋರೇಟ್ ಟ್ರೇನರ್, ಬೆಂಗಳೂರು. ಇವರು ಆಡಳಿತ ಪರಿಣಿತಿ ಸಾಧನೆಯ ಹಂತಗಳು. ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಎರಡನೇ ದಿನದ ಎರಡನೇ ಅವಧಿಯನ್ನು ಡಾ. ಕೃಷ್ಣ ಮಾನ್ಯ ಉಪನ್ಯಾಸಕರು, ಕಾರ್ಪೋರೇಟ್ ಟ್ರೈನರ್, ಬೆಂಗಳೂರು. ಇವರು ಸೌಹಾರ್ದ ಸಹಕಾರಿಗಳಲ್ಲಿ ವ್ಯಾಪಾರ ಅಭಿವೃದ್ಧಿ. ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

**ಸಂವಾದ ಕಾರ್ಯಕ್ರಮ :** ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರೊಂದಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರೊಂದಿಗೆ ಸಹಕಾರಿಯ ಯಶಸ್ವಿಯ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸದರಿ ಸಂವಾದ ಕಾರ್ಯಕ್ರಮದಲ್ಲಿ ಸ್ಪಂದನ



ಕ್ರೆಡಿಟ್ ಸೌಹಾರ್ದ ಸಹಕಾರ ಸಂಘ ನಿ., ಬೆಂಗಳೂರು, ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಉತ್ತರ ಕನ್ನಡ, ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಚಳ್ಳಕೆರೆ, ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕಲಬುರಗಿ, ಹಾಗೂ ನವ ಕಲ್ಯಾಣ ಕರ್ನಾಟಕ ಸೌಹಾರ್ದ ಸಹಕಾರಿ ಸಂಘ ನಿ., ಬೆಂಗಳೂರು, ಈ ಸಹಕಾರಿಗಳ ವಿಶೇಷತೆಗಳ ಕುರಿತು ಸಂವಾದ ಕಾರ್ಯಕ್ರಮದಲ್ಲಿ ತಿಳಿಸಲಾಯಿತು. ತರಬೇತಿಯ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಾಯಿತು.

**ಸಮಾರೋಪ ಸಮಾರಂಭ :** ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ, ಮಾನ್ಯ ನಿರ್ದೇಶಕರಾದ ಶ್ರೀ ಬಿ. ಎಸ್. ಗುಂಡುರಾವ್, ಇವರು ವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ, ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಹಾಗೂ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಪ್ರಸನ್ನಕುಮಾರ್, Regional Institute of Cooperative Management ಬೆಂಗಳೂರು, ಮಾನ್ಯ ಪ್ರಾಂತಿಯ ನಿರ್ದೇಶಕರಾದ ಡಾ. ವಿ. ರವಿಚಂದ್ರನ್, ಮಾನ್ಯ ಉಪನಿರ್ದೇಶಕರಾದ ಶ್ರೀಮತಿ ಸೌಮ್ಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ, ಶ್ರೀ ಸುಭಾಷ್ ಇಂಡಿ, ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಉಪಸ್ಥಿತರಿದ್ದರು.

## ರಾಜ್ಯದಲ್ಲಿರುವ ಅಧಿಕ ದುಡಿಯುವ ಬಂಡವಾಳ ಹೊಂದಿರುವ (30 ಕೋಟಿಗಿಂತಲ್ಲೂ ಹೆಚ್ಚು) ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ 2 ದಿನಗಳ "ಉನ್ನತ ಮಟ್ಟದ ತರಬೇತಿ"

### ತರಬೇತಿಗಳಲ್ಲಿ ಸಕ್ರೀಯವಾಗಿ ಭಾಗವಹಿಸುವಿಕೆಯಿಂದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ಸಾಧ್ಯ - ಶ್ರೀ ಜಿ. ನಂಜನಗೌಡ ಸಿ.ಎ. ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದಲ್ಲಿರುವ ಅಧಿಕ ದುಡಿಯುವ ಬಂಡವಾಳ ಹೊಂದಿರುವ (30 ಕೋಟಿಗಿಂತಲ್ಲೂ ಹೆಚ್ಚು) ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ 2 ದಿನಗಳ "ಉನ್ನತ ಮಟ್ಟದ ತರಬೇತಿ" ಕಾರ್ಯಕ್ರಮವನ್ನು ಅಂಕಿತ ವಿಸ್ತಾ ಗ್ರೀನ್ ವಿಲೇಜ್, ಕುಣಿಗಲ್ ರಸ್ತೆ, ನೆಲಮಂಗಲ ಹತ್ತಿರ, ಬೆಂಗಳೂರು ಇಲ್ಲಿ ದಿನಾಂಕ 28 ಹಾಗೂ 29ನೇ ಜೂನ್ 2024ರಂದು (ಶುಕ್ರವಾರ ಹಾಗೂ ಶನಿವಾರ) ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಜಿ. ನಂಜನಗೌಡ ಸಿಎ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಎ.ಆರ್. ಪ್ರಸನ್ನಕುಮಾರ್ ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾನ್ಯ ನಿರ್ದೇಶಕರುಗಳಾದ ಶ್ರೀ ಮಂಜುನಾಥ ಎಸ್.ಕೆ., ಶ್ರೀ ಜಿ. ಶ್ರೀಧರ್, ಶ್ರೀ ಎಂ.ಆರ್. ಪ್ರಭುದೇವ್, ಶ್ರೀ ಹೆಚ್.ಜೆ. ಹನುಮಂತಶೆಟ್ಟಿ, ಶ್ರೀ ವಿಜಯ್ ಸಿ.ಪಿ., ಶ್ರೀಮತಿ ಶೈಲಜಾ ತಪಲಿ ಇವರು ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರು ನೆರವೇರಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ ಡಾ. ಎಸ್.ಎ. ಸಿದ್ಧಾಂತಿ ಮಾನ್ಯ ಪ್ರಾದೇಶಿಕ ನಿರ್ದೇಶಕರು (ನಿ.), ಆರ್‌ಐಸಿಎಂ, ಬೆಂಗಳೂರು ಇವರು ರಾಜ್ಯ ಹಾಗೂ ರಾಷ್ಟ್ರ ಅಂತರರಾಷ್ಟ್ರೀಯ ಸಹಕಾರ ಚಳುವಳಿಯ ಪಕ್ಷಿನೋಟ ರಾಜ್ಯ ಹಾಗೂ ಕೇಂದ್ರ ಸಹಕಾರ ಸಚಿವಾಲಯದ ಕಾರ್ಯಸಾಧನೆಗಳು ಮತ್ತು ಧ್ಯೇಯ ಎಂಬ ವಿಷಯದ ಕುರಿತು, ಶ್ರೀ ದರ್ಶನ ನುಗ್ಗೇನಹಳ್ಳಿ ಮಾನ್ಯ ಬ್ಯಾಂಕಿಂಗ್ ತಜ್ಞರು, ಬೆಂಗಳೂರು ಇವರು ಸಹಕಾರಿಗಳ ಆಂತರಿಕ ವ್ಯವಸ್ಥೆಗಳ ನಿರ್ವಹಣೆ ಹಾಗೂ ನಿಯಂತ್ರಣ ಮತ್ತು ಸೌಹಾರ್ದ ಸಹಕಾ-ರಿಗಳಿಗಾಗಿ ಬ್ಯಾಂಕಿಂಗ್ ಚಟುವಟಿಕೆಗಳ ಪರಿಚಯ (Stages Of Internal Control And Basics Of Banking Knowledge To

Souharda Co-operatives) ಎಂಬ ವಿಷಯದ ಕುರಿತು, ಶ್ರೀ ಸುಭಾಷ್ ಹೆಗಡೆ ಮಾನ್ಯ ಕಾರ್ಪೋರೇಟ್ ಟ್ರೈನರ್, ಶಿವಮೊಗ್ಗ ಇವರು ಸೌಹಾರ್ದ ಸಹಕಾರಿಗಳಲ್ಲಿ ವ್ಯಾಪಾರ ಅಭಿವೃದ್ಧಿ ಹಂತಗಳು & ಮ್ಯಾನೇಜ್‌ಮೆಂಟ್ ಗೇಮ್ಸ್, ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇವರು ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಸಕ್ತ ಪ್ರಗತಿ, ಸವಾಲುಗಳು ಹಾಗೂ ಅವಕಾಶಗಳು ಎಂಬ ವಿಷಯದ ಕುರಿತು, ಶ್ರೀ ಹೆಚ್.ಎಸ್. ನಾಗರಾಜಯ್ಯ ಮಾನ್ಯ ಅಪರ ನಿಬಂಧಕರು (ನಿ.), ಬೆಂಗಳೂರು ಇವರು ಆರ್ಥಿಕ ಶಿಸ್ತು ಹಾಗೂ ಸಹಕಾರಿಗಳ ಗುಣಮಟ್ಟ ಸುಧಾರಣೆ ಹಂತಗಳು ಎಂಬ ವಿಷಯದ ಕುರಿತು, ಶ್ರೀ ಮಧುಕರ್ ಹೆಗಡೆ ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರು ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ವಿಷಯಗಳು & ಲೆಕ್ಕಪರಿಶೋಧನಾ ವರದಿಯಲ್ಲಿ ಗಮನಿಸಬೇಕಾದ ಅಂಶಗಳು ಎಂಬ ವಿಷಯದ ಕುರಿತು ಹಾಗೂ ಶ್ರೀ ಎಸ್.ಜಿ. ಕುಲಕರ್ಣಿ ಮಾನ್ಯ ಬ್ಯಾಂಕಿಂಗ್ ತಜ್ಞರು, ಬೆಂಗಳೂರು ಇವರು Cyber Security and Frauds ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.

## ಸಂವಾದ ಕಾರ್ಯಕ್ರಮ




ಸದರಿ ತರಬೇತಿಯಲ್ಲಿ ದಿನಾಂಕ 29.06.2024ರಂದು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಮಾನ್ಯ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಮಾನ್ಯ ಅಧ್ಯಕ್ಷರು, ಪಾವಗಡ ವಿ.ಸೌ.ಸ.ಸ.ನಿ., ಪಾವಗಡ ಇವರು ವಹಿಸಿಕೊಂಡಿದ್ದರು. ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ತಂತ್ರಜ್ಞಾನ ಹಾಗೂ ಡಿಜಿಟಲೀಕರಣ ಬಳಕೆ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್‌ರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಶೈಲಜಾ ತಪಲಿಯವರು ಮಹಿಳಾ ಸಬಲೀಕರಣ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರ ಕುರಿತು, ಶ್ರೀ ರಘುರಾಮ ರೆಡ್ಡಿರವರು ಯುವಕರು ಹಾಗೂ ಸಹಕಾರ ಕುರಿತು ಹಾಗೂ ಶ್ರೀ ವೀರೇಶ್ ಮಸ್ಕಿ ಮಾನ್ಯ ಮುಖ್ಯಕಾರ್ಯನಿರ್ವಾಹಕರು, ಭ್ರಮರಾಂಭ ಪ.ಸೌ.ಸ.ಸ.ನಿ., ಮಸ್ಕಿ, ರಾಯಚೂರು ಸಂವಾದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಬಡ್ಡಿಯೇತರ ಆದಾಯ ಮೂಲಗಳು ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂವಾದ ಕಾರ್ಯಕ್ರಮದ ಸಂವಾದಕರಾಗಿ ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇವರು ನಡೆಸಿಕೊಟ್ಟರು.

## ಸಮಾರೋಪ ಸಮಾರಂಭ




ದಿನಾಂಕ: 29.06.2024ರಂದು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಮಾನ್ಯ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಹಾಗೂ ಮಾನ್ಯ ಅಧ್ಯಕ್ಷರು, ಪಾವಗಡ ವಿ.ಸೌ.ಸ.ಸ.ನಿ., ಪಾವಗಡ ಇವರು ವಹಿಸಿಕೊಂಡಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್‌ರವರು ಸಮಾರೋಪ ಭಾಷಣವನ್ನು ನೆರವೇರಿಸಿದರು. ಎರಡು ದಿನಗಳ ತರಬೇತಿಯ ವರದಿಯನ್ನು ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೀಡಿದರು. ಶ್ರೀಮತಿ ರೂಪ ಆರ್‌ಡಿ ಸೋನಿ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಇವರು ಪಾರ್ಥನೆಯನ್ನು ಶ್ರೀಮತಿ ಸವಿತ ಎನ್.ಇ. ರವರು ತರಬೇತಿ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಸೂರ್ಯಕಾಂತ ದ್ಯಾಕಲೆರವರು ವಂದನಾರ್ಪಣೆಯನ್ನು ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರು, ಮೈಸೂರು ಹಾಗೂ ಕಲಬುರ್ಗಿ ಪ್ರಾಂತದಿಂದ 142 ಸೌಹಾರ್ದ ಸಹಕಾರಿಗಳಿಂದ 147 ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು. ಕಾರ್ಯಕ್ರಮ ಅತ್ಯಂತ ಉತ್ತಮವಾಗಿ ನಡೆಯಿತೆಂದು ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



## ಸಹಕಾರ ಇಲಾಖೆಯ ಕಾಯದರ್ಶಿಗಳಾಗಿ ಡಾ. ಎಂ.ಎನ್. ಅಜಯ್ ನಾಗಭೂಷಣ್ ಅಧಿಕಾರ ಸ್ವೀಕಾರ

**ಬೆಂಗಳೂರು** : ಸಹಕಾರ ಇಲಾಖೆಯ ಕಾರ್ಯದರ್ಶಿಗಳಾಗಿ ಹಿರಿಯ ಐ.ಎ.ಎಸ್. ಅಧಿಕಾರಿ ಡಾ. ಎಂ.ಎನ್. ಅಜಯ್ ನಾಗಭೂಷಣ್ ಅವರು ಅಧಿಕಾರ ವಹಿಸಿಕೊಂಡಿರುತ್ತಾರೆ.

## ಕ್ಲಸ್ಟರ್ ಮಟ್ಟದ ತರಬೇತಿ

**ಬನಹಟ್ಟಿ** : ರಬಕವಿ–ಬನಹಟ್ಟಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 26–06–2024 ರಂದು ಶ್ರೀ ದಿಗಂಬರೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಹನಗಂಡಿಯಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಸದರಿ ತರಬೇತಿಯಲ್ಲಿ ಚುನಾವಣೆಯ ಪೂರ್ವ ತಯಾರಿ ಕುರಿತು ಮಾಹಿತಿಯನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ನೀಡಿದರು. ಈ ತರಬೇತಿಯಲ್ಲಿ 16 ಸೌಹಾರ್ದ ಸಹಕಾರಿಗಳಿಂದ 18 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಪರ್ಕ ಸಭೆ




**ಬೀದರ** : ದಿನಾಂಕ 01.07.2024 ರಂದು ಕಲಬುರಗಿ ಪ್ರಾಂತದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆಯನ್ನು ಶಾರದಾ ರೂಡಸೆಟ ಸಂಸ್ಥೆ, ನೌಬಾದ, ಬೀದರನಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ನೆರವೇರಸಿದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೀರಶಟ್ಟಿಕೆಯವರು, ವಂದನಾರ್ಪಣೆಯನ್ನು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಮೃತ ಹೊಸಮನಿಯವರು ಮಾಡಿದರು. ಮಾನ್ಯ ಅಧ್ಯಕ್ಷರು ಸಹಕಾರಿಗಳೊಂದಿಗೆ ಸಮಾಲೋಚಿಸಿ ಸಹಕಾರಿಗಳು ಕೇಳಿರುವ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡಿದರು.



**ಕಲಬುರಗಿ** : ದಿನಾಂಕ 02.07.2024 ರಂದು ಕಲಬುರಗಿ ನಗರದ ರಾಮಮಂದಿರ ಹತ್ತಿರ ಹೋಟಲ್ ರಾಧಕೃಷ್ಣ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ, ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರ ಹಾಗೂ ಮುಖ್ಯ ಕಾರ್ಯನಿರ್ವಾಹಕರ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ವಹಿಸಿಕೊಂಡಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿಕಟ ಪೂರ್ವ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್ ಹಾಗೂ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್ ಉಪಸ್ಥಿತರಿದ್ದರು. ಸಂಪರ್ಕ ಸಭೆಯ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ನುಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರಾಕಲೇ ಸ್ವಾಗತ ಕೋರಿದರು.

ಸಂಪರ್ಕ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಸೌಹಾರ್ದ ಸಹಕಾರಿ ಸಂಸ್ಥೆಗಳ ಸಮಸ್ಯೆ ಆಲಿಸಿ ಸಲಹೆಗಳನ್ನು ಮತ್ತು ಅಭಿಪ್ರಾಯಗಳನ್ನು ಪಡೆದು ಅವರುಗಳಿಗೆ ಮಾರ್ಗದರ್ಶನ ಮಾಡಿದರು. ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ ನಿರೂಪಿಸಿದರು. ಕಲಬುರಗಿ ಜಿಲ್ಲೆಯ 125 ಸೌಹಾರ್ದ ಸಹಕಾರಿಗಳು ಭಾಗವಹಿಸಿದ್ದರು.



**ಯಾದಗಿರಿ** : ದಿನಾಂಕ 02.07.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಪ್ರಾಂತೀಯ ಕಚೇರಿ ಕಲಬುರಗಿ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗಾಗಿ ಮಧ್ಯಾಹ್ನ 3:30 ಗಂಟೆಗೆ ಶಹಾಪುರ ನಗರದ ಹೋಟೆಲ ಜಯಾ ಲಾಡ್ಜಿಂಗ್ ನಲ್ಲಿ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲ ರವರು ಉಪಸ್ಥಿತರಿದ್ದರು. ಸಂಪರ್ಕ ಸಭೆಯ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ನುಡಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರಾಕಲೇ ರವರು ಸಾಮಾನ್ಯ ಸಭೆಯ ಸಿದ್ಧತೆಯ ಕುರಿತು ಮಾಹಿತಿ ನೀಡಿದರು.

ಸಂಪರ್ಕ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಸೌಹಾರ್ದ ಸಹಕಾರಿಗಳ ಸಮಸ್ಯೆ ಆಲಿಸಿ ಸಲಹೆ ಮತ್ತು ಅಭಿಪ್ರಾಯಗಳನ್ನು ಪಡೆದು ಅವರುಗಳಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಿದರು. ಕಾರ್ಯಕ್ರಮವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಪವನ ನಿರೂಪಿಸಿದರು. ಯಾದಗಿರಿ ಜಿಲ್ಲೆಯ 60 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ರಾಯಚೂರು** : ದಿನಾಂಕ 03.07.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರ್ಗಿ ಪ್ರಾಂತೀಯ ಕಚೇರಿ ವತಿಯಿಂದ ಬೆಳಗ್ಗೆ 11 ಗಂಟೆಗೆ ರಾಯಚೂರು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗೆ "ಸಂಪರ್ಕ ಸಭೆ"ಯನ್ನು ಟೌನ್ ಹಾಲ್, ಸುರಕ್ಷಾ ನರ್ಸಿಂಗ್ ಹೋಂ ಪಕ್ಕ, ಅಶೋಕ್ ಭವನ ಬಸ್ ಸ್ಟಾಪ್ ಹತ್ತಿರ, ಸುಕಾಲ ಪೇಟೆ, ಸಿಂಧನೂರು. ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ರಾಯಚೂರು ಜಿಲ್ಲಾ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹನುಮಂತಯ್ಯ ಶೆಟ್ಟಿ ಯವರು, ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ. ವಿರೂಪಾಕ್ಷಪ್ಪ ರವರು, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರುಗಳಾದ ಶ್ರೀಮತಿ ಮಂಜುಳಾ ಪಾಟೀಲ್ ರವರು, ರಾಜಶೇಖರ ಬಿ ರವರು ಉಪಸ್ಥಿತರಿದ್ದರು.

ಸಭೆ ಪ್ರಾರಂಭವಾಗುವ ಮುಂಚೆ ವಾರ್ಷಿಕ ಸಾಮಾನ್ಯ ಸಭೆಯ ಬಗ್ಗೆ ಕಲಬುರ್ಗಿ ಪ್ರಾಂತೀಯ ಅಧಿಕಾರಿಗಳಾದ ಸೂರ್ಯಕಾಂತ ರಾಕಲೇ ರವರು ಮಾಹಿತಿಯನ್ನು ನೀಡಿದರು. ಸಭೆಯಲ್ಲಿ 300 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಕೊಪ್ಪಳ** : ದಿನಾಂಕ 04.07.2024ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಆಡಳಿತ ಮಂಡಳಿಯ ಸದಸ್ಯರಿಗೆ, ಸಂಪರ್ಕ ಸಭೆಯನ್ನು ಶ್ರೀ ಶಿವಶಾಂತವೀರ ಮಂಗಲ ಭವನ, ಬಿ.ಎಸ್ ಪವಾರ್ ಹೋಟೆಲ್ ಹಿಂದುಗಡೆ, ಕೊಪ್ಪಳ ಇಲ್ಲಿ ಆಯೋಜಿಸಲಾಗಿತ್ತು ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರವರು ವಹಿಸಿದರು.

ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡಿಪುಡಿ, ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪಾ ಪತ್ತಾರವರು, ಕೊಪ್ಪಳ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತರವರು ಹಾಗೂ ಆರ್‌ಕೆಡಿಸಿಸಿ ಬ್ಯಾಂಕ್ ನಿರ್ದೇಶಕರು ಉಪಸ್ಥಿತರಿದ್ದರು. ಸ್ವಾಗತವನ್ನು ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ ರವರು ಸ್ವಾಗತಿಸಿದರು. ಸಂಪರ್ಕ ಸಭೆಯಲ್ಲಿ 320 ಪ್ರತಿನಿಧಿಗಳು ಭಾಗವಹಿಸಿದ್ದರು.



## ಭಾವಪೂರ್ಣ ಶ್ರದ್ಧಾಂಜಲಿ

ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು ಮತ್ತು ಶ್ರೀ ಅರಿಹಂತ ಉದ್ಯೋಗ ಸಮೂಹದ ಸಂಸ್ಥಾಪಕ ಅಧ್ಯಕ್ಷರು ಹಾಗೂ ದಕ್ಷಿಣ ಭಾರತ ಜೈನ ಸಭಾದ ಅಧ್ಯಕ್ಷರಾದ **ಶ್ರೀ ರಾವಸಾಹೇಬ ಅ. ಪಾಟೀಲ (ದಾದಾ)** ದಿನಾಂಕ 25-06-2024 ರಂದು ನಿಧನರಾದರು. ಶ್ರೀಯುತರ ನಿಧನಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಸಂತಾಪ ಸೂಚಿಸಲಾಗಿದೆ.

## ಇ-ಸ್ಟಾಂಪ್ ವಿಭಾಗದ ಮಾಹಿತಿ

**ಎಲ್ಲರಿಗೂ ನಮಸ್ಕಾರ,**

ರಾಜ್ಯದಲ್ಲಿ ಇ-ಸ್ಟಾಂಪ್ ವ್ಯವಹಾರ ನಡೆಸುತ್ತಿರುವ ಎಸಿಸಿಗಳಿಗೆ 03/07/2024ರಿಂದ ಇ-ಸ್ಟಾಂಪ್ ಪೇಪರ್ ಸೃಜನೆ ಮಾಡಲು ಗೂಗಲ್ ಅಥೆಂಟಿಕೇಟರ್ ಅಪ್ಲಿಕೇಶನ್ ಬಳಸುವುದನ್ನು ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಕಡ್ಡಾಯ ಮಾಡಿರುವ ಹಿನ್ನೆಲೆಯಲ್ಲಿ, ಗೂಗಲ್ ಅಥೆಂಟಿಕೇಟರ್ ಅಪ್ಲಿಕೇಶನ್ ಅಳವಡಿಸಿಕೊಳ್ಳುವ ಬಗ್ಗೆ ಈ ಕೆಳಗೆ ತಿಳಿಸಿದೆ,

1. ಈ ಗುರುತಿನ ಗೂಗಲ್ ಅಥೆಂಟಿಕೇಟರ್ ಅಪ್ಲಿಕೇಶನ್‌ನನ್ನು ಪ್ಲೇಸ್ಟೋರ್‌ನ ಮೂಲಕ ನಿಮ್ಮ ಆಂಡ್ರಾಯಿಡ್ ಮೊಬೈಲ್‌ನಲ್ಲಿ ಇನ್ಸ್ಟಾಲ್ ಮಾಡಿಕೊಳ್ಳಿ,
2. ಇನ್ಸ್ಟಾಲ್ ಮಾಡಿಕೊಂಡ ನಂತರ, ಅಪ್ಲಿಕೇಷನ್ ತೆರೆದು Get Statred ಎಂಬ ಆಯ್ಕೆ ಸೆಲೆಕ್ಟ್ ಮಾಡಿ,
3. ನಂತರ ನಿಮ್ಮ ಮೊಬೈಲ್‌ನಲ್ಲಿ Sign in ಮಾಡಿ ಅಥವಾ Use google authenticator without an account ಎಂಬ ಎರಡು ಆಯ್ಕೆ ಬರುತ್ತದೆ, Sign in ಆಯ್ಕೆ ಮಾಡಿದವರು ನಿಮ್ಮ ಇ-ಮೇಲ್ ಮೂಲಕ ಲಾಗಿನ್ ಮಾಡಿ ನಂತರ Use google authenticator without an account ಎಂಬ ಆಯ್ಕೆ ಮಾಡಿ,

   ನಂತರ ಅಲ್ಲಿನ + ಬಟನ್ ಒತ್ತಿ,
4. ನಂತರ Enter a setup key ಆಯ್ಕೆ ಮಾಡಿ, ಮೊಬೈಲ್ ಬದಿಗಿರಿಸಿ ಸ್ವಲ್ಪ ಕಾಯಿರಿ
5. ನಂತರ ಕಂಪ್ಯೂಟರ್‌ನಲ್ಲಿ ಎಸ್.ಎಚ್.ಸಿ.ಐ.ಎಲ್ ವೆಬ್‌ಸೈಟ್‌ನಲ್ಲಿ ಬಳಕೆದಾರರ (ಯೂಸರ್/ಸೂಪರ್‌ವೈಸರ್) ಐಡಿಯೊಂದಿಗೆ ಲಾಗಿನ್ ಮಾಡಿ,
6. ಗೂಗಲ್ ಲಾಗಿನ್ ಅಥೆಂಟಿಕೇಷನ್ ಎಂಬ ಪರದೆಯಲ್ಲಿ ಗೂಗಲ್ ಅಥೆಂಟಿಕೇಟರ್ ಎಂಬುದನ್ನು ಆಯ್ಕೆ ಮಾಡಿ Next ಎಂಬ ಪದ ಆಯ್ಕೆ ಮಾಡಿ,
7. ನಂತರ ನಿಮಗೆ ಈ ಕೆಳಗಿನ ಪರದೆಯಲ್ಲಿ Click here ಆಯ್ಕೆ ಮಾಡಿ,
8. ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ, 16 ಅಂಕಿಯ ಪಾಸ್‌ವರ್ಡ್ ಸೃಜನೆಯಾಗುತ್ತದೆ,
9. ನಂತರ ಮೊದಲಿಗೆ ಕಂಪ್ಯೂಟರ್‌ನಲ್ಲಿ 16 ಅಂಕಿಯ ಪಾಸ್‌ವರ್ಡ್ ನಮೂದಿಸಿ, ಸಬ್ಮಿಟ್ ಮಾಡಿ,

   ನಂತರ ಮತ್ತೊಮ್ಮೆ ನಿಮ್ಮ ಮೊಬೈಲ್ ಕೈಗೆತ್ತಿಕೊಂಡು Setup key ಆಯ್ಕೆಯ ನಂತರ ಬರುವ Enter Account Details ನಲ್ಲಿ ಕೇಳುವ Account Name ಎಂಬಲ್ಲಿ ನಿಮ್ಮ ಇ-ಸ್ಟಾಂಪ್ ಬಳಕೆದಾರರ ಐಡಿ ನಮೂದಿಸಿ, ನಂತರ Your Key ಎಂಬಲ್ಲಿ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್‌ನಿಂದ ರಚಿತವಾದ ಯೂಸರ್/ಸೂಪರ್‌ವೈಸರ್ ಐಡಿಗೆ ಸಂಬಂಧಿಸಿದ ಮೊಬೈಲ್‌ಗೆ ಸ್ವೀಕರಿಸಿದ ಕಂಪ್ಯೂಟರ್‌ನಲ್ಲಿ ನಮೂದಿಸಿದ ಅದೇ 16 ಅಂಕಿಯ ಪಾಸ್‌ವರ್ಡ ನಮೂದಿಸಿ Add ಎಂಬ ಆಯ್ಕೆ ಒತ್ತಿ.

   (*** ಮೊಬೈಲ್ ಮತ್ತು ಕಂಪ್ಯೂಟರ್‌ನಲ್ಲಿ ನಮೂದಿಸುವ 16 ಅಂಕಿಯ ಪಾಸ್‌ವರ್ಡ ಒಂದೇ ಆಗಿರಬೇಕು ಮತ್ತು ನಿಮಗೆ ಈ 16 ಅಂಕಿಯ ಪಾಸ್‌ವರ್ಡ ಮೊಬೈಲ್ ಮತ್ತು ಕಂಪ್ಯೂಟರ್‌ನಲ್ಲಿ ನಮೂದಿಸಲು ಇರುವ ಸಮಯ ಕೇವಲ 180 ಸೆಕೆಂಡ್/3ನಿಮಿಷ ಮಾತ್ರ.)
10. ಕಂಪ್ಯೂಟರ್ ಮತ್ತು ಮೊಬೈಲ್‌ನಲ್ಲಿ 16 ಅಂಕಿಯ ಪಾಸ್‌ವರ್ಡ್ ಯಶಸ್ವಿಯಾಗಿ ನಮೂದಿಸಿದ ನಂತರ ನಿಮ್ಮ ಗೂಗಲ್ ಅಥೆಂಟಿಕೇಟರ್ ಅಪಲಿಕೇಶನ್‌ನಲ್ಲಿ 6 ಅಂಕಿ ಪಾಸ್‌ವರ್ಡ ಸೃಜನೆಯಾಗುತ್ತದೆ.
11. ಈ ಅಂಕಿಯ ಪಾಸ್‌ವರ್ಡ್ ಕೆಳಗಿನ ಪರದೆಯಲ್ಲಿ ಕೇಳಿರುವ Enter Google Authenticator Passcode ಎಂಬಲ್ಲಿ ನಮೂದಿಸಿ ಲಾಗಿನ್ ಮಾಡಿ ಇ-ಸ್ಟಾಂಪ್ ಸೃಜನೆ ಮಾಡಿ.

**– ಶ್ರೀ ರಾಜೇಂದ್ರ ರಾವ್ ಶಿಂಧೆ ಹೆಚ್. ಅಧಿಕಾರಿ, ಇ-ಸ್ಟಾಂಪಿಂಗ್ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು**

## ಜೂನ್ – 2024 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಹಾಗೂ ನ್ಯಾಯಾಲಯದ ಆದೇಶದನುಸಾರ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997ರ ಕಲಂ 38ಎ ರನ್ವಯ ಜೂನ್ ತಿಂಗಳಲ್ಲಿ ಒಟ್ಟು 03 ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾ–ರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಸಮಾಪನಾಧಿಕಾರಿ ನೇಮಕವಾಗಿರುವ ಕುರಿತು.**

**ಅ. ಶುಭದ ಸೌಹಾರ್ದ ಕೋ–ಆಪರೇಟಿವ್ ಲಿ., ಬೆಂಗಳೂರು (ಬಿಜಿಯು–0257).**

ಶುಭದ ಸೌಹಾರ್ದ ಕೋ–ಆಪರೇಟಿವ್ ಲಿ., ಬೆಂಗಳೂರು ಸಹಕಾರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ–1997ರ ಪ್ರಕರಣ 48ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಮಾನ್ಯ ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ ಇವರು ದಿನಾಂಕ 06.06.2024ರಂದು ಸಹಕಾರಿಯ ಸಮಾಪನಾಧಿಕಾರಿಯಾಗಿ ಶ್ರೀ ಅನಿಲ್ ಕುಮಾರ್, ಎಮ್., ಸಹಾಯಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**3. ಸೌಹಾರ್ದ ಸಹಕಾರಿಗಳ ಸಮಾಪನಾಧಿಕಾರಿ ಬದಲಾವಣೆಯಾಗಿರುವ ಕುರಿತು.**

| ಕ್ರ.ಸಂ | ಸೌಹಾರ್ದ ಸಹಕಾರಿಯ ಹೆಸರು | ಹಿಂದಿನ ಸಮಾಪನಾಧಿಕಾರಿಯ ಹೆಸರು | ಬದಲಾವಣೆಯಾದ ಸಮಾಪನಾಧಿಕಾರಿಯ ಹೆಸರು |
|---|---|---|---|
| 01 | ಶ್ರೀ ರಾಘವೇಂದ್ರಸ್ವಾಮಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ | ಶ್ರೀ ಚಂದ್ರಶೇಖರಯ್ಯ ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. | ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ. ರಾ.ಸೌ.ಸಂ.ಸ.ನಿ., ಮೈಸೂರು. |
| 02 | ಕ್ರಾಂತಿವೀರ ಸಂಗೋಳ್ಳಿರಾಯಣ್ಣ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ | ಶ್ರೀ ಚಂದ್ರಶೇಖರಯ್ಯ ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. | ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ. ರಾ.ಸೌ.ಸಂ.ಸ.ನಿ., ಮೈಸೂರು. |
| 03 | ಸ್ನೇಹ ಸಂಜೀವಿನಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ನುಗ್ಗೇಹಳ್ಳಿ, ಚನ್ನರಾಯಪಟ್ಟಣ | ಶ್ರೀ ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. | ಶ್ರೀ ಪಾಲರಾಜ್ ಎ., ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. |
| 04 | ಶ್ರೀದೇವಿ ಹಾಸನಾಂಬ ಸೌಹಾರ್ದ ಸಹಕಾರಿ ನಿ., ಹಾಸನ | ಶ್ರೀ ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. | ಶ್ರೀ ಪಾಲರಾಜ್ ಎ., ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. |
| 05 | ಜೈ ಮಾರುತಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಹಾಸನ | ಶ್ರೀ ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. | ಶ್ರೀ ಪಾಲರಾಜ್ ಎ., ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. |
| 06 | ಶ್ರೀ ಅನ್ನಪೂರ್ಣೇಶ್ವರಿ ಸೌಹಾರ್ದ ಸಹಕಾರಿ ನಿ., ಚಿಂದೇನಹಳ್ಳಿ, ಅರಸೀಕೆರೆ(ತಾ) | ಶ್ರೀ ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. | ಶ್ರೀ ಪಾಲರಾಜ್ ಎ., ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. |
| 07 | ನಿಸರ್ಗ ಸೌಹಾರ್ದ ಸ್ವ–ಸಹಾಯ ಸಹಕಾರಿ ನಿ., ಕೆಂಕರೆ, ಅರಸೀಕೆರೆ(ತಾ) | ಶ್ರೀ ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. | ಶ್ರೀ ಪಾಲರಾಜ್ ಎ., ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. |

ಮೇಲ್ಕಂಡ ಕ್ರಮಸಂಖ್ಯೆ (1 ಮತ್ತು 2) ಸೌಹಾರ್ದ ಸಹಕಾರಿಗಳಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ಚಂದ್ರಶೇಖರಯ್ಯ ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು ಇವರು ವರ್ಗಾವಣೆಯಾಗಿರುವುದರಿಂದ ಇವರ ಬದಲಾಗಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. ಇವರನ್ನು ಮಾನ್ಯ ಸಹಕಾರಿಗಳ ಉಪ ನಿಬಂಧಕರು, ಹಾಸನ ಜಿಲ್ಲೆ ಇವರು ದಿನಾಂಕ 28.05.2024ರಂದು ನೇಮಕ ಮಾಡಿ ಆದೇಶ ಮಾಡಿರುತ್ತಾರೆ. ಹಾಗೂ ಕ್ರಮಸಂಖ್ಯೆ (3 ಮತ್ತು 7) ಸೌಹಾರ್ದ ಸಹಕಾರಿಗಳಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ಚಂದ್ರಶೇಖರಯ್ಯ ಜಿಲ್ಲಾ ಸಂಯೋಜಕರು, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ.,

ಮೈಸೂರು ಇವರು ವರ್ಗಾವಣೆಯಾಗಿರುವುದರಿಂದ ಇವರ ಬದಲಾಗಿ ಶ್ರೀ ಪಾಲರಾಜ್ ಎ., ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಪ್ರಾಂತ ಕ.ರಾ.ಸೌ.ಸಂ.ಸ.ನಿ., ಮೈಸೂರು. ಇವರನ್ನು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಉಪ-ವಿಭಾಗ ಹಾಸನ ಇವರು ದಿನಾಂಕ 24.05.2024ರಂದು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

## ಸಂಯುಕ್ತ ಸಹಕಾರಿಗಳ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ



**ಬೆಂಗಳೂರು** : ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ಕಾರ್ಯಕ್ಷಮತೆ ಹಾಗೂ ವೃತ್ತಿಪರತೆ ಹೆಚ್ಚಿಸುವ ದೃಷ್ಟಿಯಿಂದ ಪ್ರಗತಿ ಪರಿಶಿಲನಾ ಸಭೆಯನ್ನು ದಿನಾಂಕ 21 & 22ನೇ ಜೂನ್ 2024ರಂದು ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗಂಡುರಾವ್ ರವರು ವಹಿಸಿದ್ದರು. ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಉಪಸ್ಥಿತರಿದ್ದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ್‌ರವರು ಸ್ವಾಗತಿಸಿದರು. ನಿರೂಪಣೆಯನ್ನು ಬೆಂಗಳೂರು ವಿಭಾಗೀಯ ಅಧಿಕಾರಿಗಳಾದ ಶ್ರೀ ಶ್ರೀಧರ್‌ರವರು ನಡೆಸಿಕೊಟ್ಟರು.

ಉದ್ಘಾಟನಾ ಕಾರ್ಯಕ್ರಮದ ನಂತರ ಮಾನ್ಯ ಅಧ್ಯಕ್ಷರು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಹೇಗೆ ತಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಬೇಕು ಎಂಬುದರ ಕುರಿತು ಹಲವು ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು.

| 150 | Leadership Development Programme for Chairmen/ Directors of Multi State Cooperative Societies of Punjab | Punjab | 18 - 20 March |
| 151 | Leadership Development Programme for Chairmen/ Directors of UCBs and T/C Societies of Maharashtra | Maharashtra | 24 - 25 March |
| **New Programmes introduced** | | | |
| 152 | Training Programme on Export of Agriculture, processed and value added Products | NCCE, New Delhi | 3 days in June |
| 152 | Training Programme on Organic Farming | NCCE, New Delhi | 3 days in August |
| 153 | Training Programme on Renewable energy | NCCE, New Delhi | 3 days in November |
| 154 | Training Programme for the banking sector on awareness for BR Act and Cyber Security | NCCE, New Delhi | 3 days in January |

## About National Cooperative Union of India

The National Cooperative Union of India (NCUI) was established in 1929 as All India Cooperative Institutes Association and transitioned to its current form in 1961. Since inception, the organization has grown manifold in terms of its activities and programs and now represents 296 member institutions across the nation. The goal of the NCUI is to promote and develop the cooperative movement in India, to educate, guide and assist the people in their efforts, to build up and expand the cooperative sector and to serve as an exponent of cooperative opinion in accordance with cooperative principles. The organization response across decades, has recognized the evolving societal context to ensure that it continues to make relevant and meaningful contributions to the Indian cooperative movement and is among the torchbearers of the cooperative movement in the country. One of the key objectives of the NCUI is to organise cooperative education and training programmes and popularise the principles and practices of cooperation. This objective of the NCUI is met through the National Centre for Cooperative Education.

## About National Centre for Cooperative Education

The National Centre for Cooperative Education (NCCE) was set up in 1958 to address the need for systemic cooperative education for practitioners in the cooperative movement. The NCCE came into being as the "All India Cooperative Instructors Training Centre" in 1958. It has since expanded its mandate from building capacity of trainers to conduct member education programs, to an institution that is designing and implementing training interventions to support the gamut of needs of cooperative institutions. NCCE has successfully managed training interventions for managerial personnel across levels for district, state, and national co-operatives in diversified geographies and for widely varying activities The organization offers a range of training solutions to include diploma courses, leadership development programs, programs to train faculty of other cooperative education institutions as well as other programmes listed below:

- Diploma Programme in Cooperative Education and Development (3 months) for Indian and overseas participants.
- Certificate Course on Cooperative Law ( 2 Weeks)
- One year and 2 - year Courses on Cooperative Management for students of central and state universities.
- Cooperation and Cooperative Management Programme for employees of IFFCO, KRIBHCO and other cooperatives
- Certificate course in computer applications.
- Certificate course in Financial Accounting + Taxation.
- Leadership Development Programme for the chairmen/directors of different sectors of the cooperative movement (3days) for India, and SAARC countries.
- Refresher Course for the personnel of NCUI education field projects.
- Refresher and Research- oriented Course in "Cooperation" for lectures / readers of college / university ( 1 week )
- TOT Course for the faculty of state cooperative unions/unior cooperative training centers
- 2 weeks training programme for women (skill development).
- Capacity building programmes for PACS 15 days.
- Training Course for Students from Educational Institutions/Universities on Formation of Cooperative Societies. (5 days)
- Training Programme on Export of Agriculture, Processed of Value added products. (3 days)
- Training programme on organic farming (3 days)
- Training programme on Renewable energy.
- Training Programme for the banking sector on awareness for BR Act and Cyber Security.

*The brochures of all the training programmes are available in the website: www.ncui.coop





**National Cooperative Union of India (NCUI)**
**National Centre for Cooperative Education**

3, Siri Institutional Area, August Kranti Marg, New Delhi-110016, India,
Tel. (O) : **011-41811158,** Email: nccend@yahoo.co.in, Website: www.ncui.coop
**Ms. Savitri Singh,** Deputy Chief Executive
Mobile: **9873089334,** nccend@yahoo.co.in
**Ms. Dipti Yadav,** Assistant Director, Mobile: **9532140954**
**Ms. Inderpreet Kaur,** Assistant Director, Mobile: **8800833523**

## ಕ್ಲಸ್ಟರ್ ಮಟ್ಟದ ತರಬೇತಿ



**ಚಿಕ್ಕಮಗಳೂರು** : ದಿನಾಂಕ 25 ಜೂನ್ 2024 ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇ–ರಿಯಿಂದ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ ಮತ್ತು ಎನ್ ಆರ್ ಪುರ ತಾಲೂಕು ಸೌಹಾರ್ದ ಸಹಕಾರಿಗಳ ಮು.ಕಾ.ನಿ ಹಾಗೂ ಮಾರಾಟಾಧಿಕಾರಿಗಳಿಗೆ "ದಾವ ದಾಖಲಾತಿ ಮತ್ತು ಸಾಲ ವಸೂಲಾತಿ" ಕ್ರಮಗಳ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸುಮುಖ ಭವನ ಬಾಳೆಹೊನ್ನೂರು, ಇಲ್ಲಿ ಆಯೋಜಿಸಲಾಗಿತ್ತು

ಈ ತರಬೇತಿಯ ಉದ್ಘಾಟನೆ ಕಾರ್ಯಕ್ರಮವನ್ನು ಬಾಳೆಹೊನ್ನೂರು ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಟಿ. ವೆಂಕಟೇಶ್ ರವರು ನೆರವೇರಿಸಿದರು. ಪ್ರಾಸ್ತಾವಿಕವಾಗಿ ಮೈಸೂರು ಪ್ರಾಂತೀಯ ಅಧಿಕಾ–ರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ 16 ಸೌಹಾರ್ದ ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.

---



**ದಾವಣಗೆರೆ** : ದಿನಾಂಕ 10.06.2024 ರಂದು ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ದಾವಣಗೆರೆ ಸಹಕಾರಿಗೆ ಸಂಯುಕ್ತ ಸಹಕಾ–ರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ, ಸಹಕಾರಿಯ ಉತ್ತಮ ಬೆಳವಣಿಗೆಗೆ ಅಭಿನಂದಿಸಿದರು. ಹಾಗೂ ಸಹಕಾರಿಗೆ ಅಗತ್ಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಂ.ಆರ್ ಪ್ರಭುದೇವ್‌ರವರು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಸವರಾಜ್.ಜಿ ಮಾಕಳ್ ಮತ್ತು ವ್ಯವಸ್ಥಾಪಕರಾದ ಶ್ರೀ ಮಹಾರುದ್ರಪ್ಪ ಎಸ್.ಸಿ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

---



**ಕೊಡಗು** : ದಿನಾಂಕ : 22.06.2024ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಹಾಗೂ ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ ರವರು ಕೊಡಗು ಸೌಹಾರ್ದ ಸಹಕಾರಿ ಸಂಘ ನಿ, ಸಹಕಾರಿಯ ಭೇಟಿ ನೀಡಿ ಸಹಕಾರಿ ಆರ್ಥಿಕ ಮಾಹಿತಿಯನ್ನು ಪಡೆದರು ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ ಮಾರ್ಗದರ್ಶನ ಮಾಡಿದರು.

---

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ




**ಮೂಡಲಗಿ** : ತಾಲ್ಲೂಕಿನ ನಾಗನೂರ ಪಟ್ಟಣದ ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸೊಸೈಟಿಗೆ ಮುಂದಿನ ಐದು ವರ್ಷಗಳ ಅವಧಿಗೆ ಜರುಗಿದ ಅಧ್ಯಕ್ಷರ – ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಸವರಾಜು ಗೌಡಪ್ಪ ತಡಸನವರ ಹಾಗೂ ಉಪಾಧ್ಯಕ್ಷರಾಗಿ ಶಿವಲಿಂಗಪ್ಪ ಲಕ್ಕಪ್ಪ ಗೋಟೂರ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾ ಅಧಿಕಾರಿ ಬೆಳಗಾವಿ ಸಹಕಾರ ಸಂಘಗಳ ಉಪ ನಿಬಂಧಕರಾದ ಕಛೇರಿಯ ವಿ.ಡಿ ಲಕ್ಷಾಣೆ ತಿಳಿಸಿದ್ದಾರೆ.

## ಉದ್ಘಾಟನೆ



**ಕೊಪ್ಪಳ** : ಗಂಗಾ–ಯಮುನಾ ಸೌಹಾರ್ದ ಸಹಕಾರಿ ನಿ., ಕೊಪ್ಪಳ ನೂತನ ಕಟ್ಟಡದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ.ಮ.ನಿ.ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಗಂಗಾವತಿಯ ಪ್ರಾಣೇಶ ಹಾಸ್ಯ ಭಾಷಣಕಾರರು, ಶ್ರೀ ರಾಜಶೇಖರ ಹಿಟ್ನಾಳ ಮಾನ್ಯ ಲೋಕಸಭಾ ಸದಸ್ಯರು ಕೊಪ್ಪಳ ಮತ್ತು ಶ್ರೀ ರಮೇಶ ವೈದ್ಯ ರಾಷ್ಟ್ರೀಯ ಸಂರಕ್ಷಕರು ಸಹಕಾರ ಭಾರತಿ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರರವರು ಮತ್ತು ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕರವರು, ಒಕ್ಕೂಟದ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಪುಡಿ ಒಕ್ಕೂಟದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು.



**ಭಟ್ಕಳ** : ದಿನಾಂಕ 08.06.2024ರಂದು ಮದರ್ ಮೇರಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸಂತೆಕಟ್ಟೆ ಇದರ ನಾಲ್ಕನೇ ಶಾಖೆಯನ್ನು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ತೆರ್ನಮಕ್ಕಿ ಗ್ರಾಮದಲ್ಲಿ ಉದ್ಘಾಟನಾ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಸದರಿ ಶಾಖೆಯ ಉದ್ಘಾಟನೆಯನ್ನು ಶ್ರೀ ಮಂಕಾಳ ಎಸ್ ವೈದ್ಯ, ಮಾನ್ಯ ಸಚಿವರು ಕರ್ನಾಟಕ ಸರ್ಕಾರ ಇವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ. ರವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.



**ಕಲಬುರಗಿ** : ದಿನಾಂಕ 14.06.2024 ರಂದು ಪ್ರಾಂತೀಯ ಕಛೇರಿಗೆ ಪ್ರಥಮ ಬಾರಿಗೆ ಆಗಮಿಸಿದ ಶ್ರೀ ವಿಶ್ವನಾಥ ಹಿರೇಮಠ ಮಾನ್ಯ ಅಧ್ಯಕ್ಷರು ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ಅಧ್ಯಕ್ಷರು, ನಿರ್ದೇಶಕರು ಇವರಿಗೆ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ವಿಶ್ವನಾಥ ಸರ್ ರವರ ಧರ್ಮಪತ್ನಿ ಹಾಗೂ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಶ್ರೀ ತುಳುಶಿವಳ್ಳಿ ಸೌಹಾರ್ದ ಸಹಕಾರ ಸಂಘದ 5ನೇ ಸರ್ವ ಸದಸ್ಯರ ಸಭೆ ದಿನಾಂಕ 16–06–2024ರಂದು ಸಂಜೆ 4:00ಗೆ ಶ್ರೀ ಕೃಷ್ಣ ಧಾಮ ದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

## ಭೇಟಿ

**ಶಿವಮೊಗ್ಗ** : ದಿನಾಂಕ 11.06.2024ರಂದು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್‌ರವರು ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ಸಂಘ ನಿ., ಹೊಸನಗರ ಶಿವಮೊಗ್ಗ, ಕೊಡಚಾದ್ರಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತೀರ್ಥಹಳ್ಳಿ, ಶ್ರೀ ಭದ್ರಕಾಳಿ ಸೌಹಾರ್ದ ಸಹಕಾರಿ ನಿ., ಸಾಗರ ಶಿವಮೊಗ್ಗ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಅಗತ್ಯ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಿದರು.

## ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘದ ನೂತನ ಕಟ್ಟಡ ಉದ್ಘಾಟನೆ:



**ಬಾಗಲಕೋಟೆ** : ದಿನಾಂಕ 23-06-2024 ರವಿವಾರದಂದು, ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಪ್ರಧಾನ ಕಚೇರಿಯ ಉದ್ಘಾಟನಾ ಸಮಾರಂಭ ಜರುಗಿತು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ಪರಮಪೂಜ್ಯ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ಕನ್ನೇರಿಮಠ, ಕೋಲ್ಲಾಪೂರ ಇವರು ವಹಿಸಿಸಿದ್ದರು. ನೂತನ ಕಟ್ಟಡದ ಉದ್ಘಾಟನೆಯನ್ನು ಸಹಕಾರಿ ಸಚಿವರಾದ ಶ್ರೀ ಕೆ.ಎನ್.ರಾಜಣ್ಣ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಚಿವರಾದ ಶ್ರೀ ಎಸ್.ಆರ್.ಪಾಟೀಲ ವಹಿಸಿದ್ದರು. ನಾಮಫಲಕವನ್ನು ಸಂಸದರಾದ ಶ್ರೀ ಪಿ.ಸಿ.ಗದ್ದಿಗೌಡರ ಅನಾವರಣ ಗೊಳಿಸಿದರು. ರಾಜ್ಯಸಭಾ ಸದಸ್ಯರಾದ ಶ್ರೀ ನಾರಾಯಣ ಸಾ ಭಾಂಡಗೆ ಆಡಳಿತ ಮಂಡಳಿ ಸಭಾಭವನವನ್ನು ಉದ್ಘಾಟಿಸಿದರು. ಸಭಾ ಭವನದ ಉದ್ಘಾಟನೆಯನ್ನು ಮಾಜಿ ಶಾಸಕರಾದ ಶ್ರೀ ವೀರಣ್ಣ ಚರಂತಿಮಠ ನೇರವೇರಿಸಿದರು. ಕ್ಯಾಶ್ ಕೌಂಟರ್ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ನೇರವೇರಿಸಿದರು. ವೇದಿಕೆ ಕಾರ್ಯಕ್ರಮವನ್ನು ರಾಜ್ಯ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಬೆಳ್ಳಿಪ್ರಕಾಶ ಉದ್ಘಾಟಿಸಿದರು. ವೇದಿಕೆ ಮೇಲೆ ಮಾಜಿ ಶಾಸಕ ಎಸ್.ಜಿ. ನಂಜಯ್ಯನಮಠ, ರಾಜ್ಯ ಅಪೆಕ್ಸ್ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಸಿ.ಎನ್.ದೇವರಾಜ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ನಿರ್ದೇಶಕರು ಹಾಗೂ ಬಾಪೂಜಿ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಜಿ.ಎನ್.ಪಾಟೀಲ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಬಾಪೂಜಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಎಂ.ಎಸ್. ಪಾಟೀಲ, ಎಂ.ಟಿ.ಅರಳಿಕಟ್ಟಿ, ಎಸ್.ಬಿ. ಬೆಳಗಲಿ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್.ಸಿ. ಮೋಟಗಿ ಇತರರು ಉಪಸ್ಥಿತರಿದ್ದರು.

ಪರಮಪೂಜ್ಯ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ಮಾತನಾಡುತ್ತ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಸಂಘವು ಸಾಮಾನ್ಯ ಜನರ ಆಧಾರ ಸ್ತಂಭವಾಗಿದೆ. ಇಂದಿನ ಪೈಪೋಟಿ ಮಧ್ಯೆಯೂ ಸಹಕಾರಿ ಸಂಸ್ಥೆಗಳು ತಮ್ಮ ಬೇರುಗಳನ್ನು ಗಟ್ಟಿಗೊಳಿಸಿಕೊಂಡು ಬೆಳೆಯುತ್ತಿವೆ ಎಂದು ತಿಳಿಸಿದರು. ರೈತರಿಗಾಗಿ 1905ರಲ್ಲಿ ಹುಟ್ಟಿಕೊಂಡ ಸಹಕಾರ ಕ್ಷೇತ್ರ ಇಂದು ಎಲ್ಲ ರಂಗದಲ್ಲೂ ವ್ಯಾಪಿಸಿದೆ. ಸಹಕಾರ ಕ್ಷೇತ್ರದಲ್ಲಿ ಉತ್ತಮ ಆಡಳಿತಗಾರರ ಅವಶ್ಯಕತೆ ಇರುತ್ತದೆ. ಆಡಳಿತ ವೈಫಲ್ಯದಿಂದಲೇ ದೇಶದಲ್ಲಿ ಅನೇಕ ಸಹಕಾರಿ ಸಂಘಗಳು ನಷ್ಟವಾಗಿವೆ. ಮಾಜಿ ಸಚಿವ ಎಸ್.ಆರ್.ಪಾಟೀಲರ ಮೇಲಿನ ವಿಶ್ವಾಸದಿಂದಲೇ ಇಂದು ಬಾಪೂಜಿ ಸಂಸ್ಥೆಯಲ್ಲಿ ಜನರು ಒಂದು ಸಾವಿರ ಕೋಟಿ ರೂ.ವರೆಗೆ ಠೇವಣಿ ಇಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಸಂಸ್ಥೆ ಗ್ರಾಹಕರಿಗೆ ಹೆಚ್ಚಿನ ಸೇವೆ ನೀಡುತ್ತ ಉತ್ತುಂಗಕ್ಕೆ ಏರಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಸಹಕಾರಿ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ಇವರು ಸಭೆಯನ್ನು ಉದ್ದೇಶಿಸಿ ಉತ್ತರ ಕರ್ನಾಟಕದಲ್ಲಿ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಬೆಳವಣಿಗೆಯಲ್ಲಿ ಸಹಕಾರಿ ಕ್ಷೇತ್ರದ ಪಾತ್ರ ಹಿರಿದಾಗಿದೆ. ಮುಖ್ಯವಾಗಿ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಯಲ್ಲಿ ಸಹಕಾರಿ ಸಂಘಗಳ ಕೊಡುಗೆ ಮಹತ್ತರವಾಗಿದೆ ಎಂದು ಹೇಳಿದರು. ರಾಷ್ಟ್ರೀಕೃತ ಬ್ಯಾಂಕ್‌ಗಳು ಕೇವಲ ಕಾಗದಪತ್ರಗಳನ್ನು ಜೋಡಿಸಲು ಹೇಳಿ ಸಾಲ ಕೊಡಲಾಗುವುದಿಲ್ಲ ಎಂದು ನಿರಾಕರಿಸುತ್ತವೆ. ಇದರಿಂದಲೇ ಹೆಚ್ಚಿನ ಸಕ್ಕರೆ ಕಾರ್ಖಾನೆಗಳು ಸಹಕಾರ ಸಂಘಗಳಿಂದ ಸಾಲ ಪಡೆದು ಪ್ರಾರಂಭವಾಗಿವೆ ಎಂದರು. ಪತ್ತಿನ ಸಹಕಾರಿ ಸಂಘಗಳಲ್ಲಿ ಸಾಲ ಪಡೆದವರು ಸಾಲವನ್ನು ಸದುದ್ದೇಶಕ್ಕೆ ಬಳಸುವ ಮೂಲಕ ಸರಿಯಾಗಿ ಬಡ್ಡಿ ಸಮೇತ ಕಟ್ಟಿದಾಗ ಮಾತ್ರ ಸಂಘಗಳು ಬೆಳೆಯಲು ಸಾಧ್ಯವಾಗುತ್ತದೆ. ಬಾಪೂಜಿ ಸಂಸ್ಥೆ ರಾಜ್ಯದ ಎಲ್ಲೆಡೆ ತನ್ನ ಕಚೇರಿ ಸ್ಥಾಪಿಸಬಹುದು. ಆದರೆ, ಅದು ಬಹುರಾಜ್ಯ ಪತ್ತಿನ ಸಹಕಾರಿ ಸಂಘವಾಗಲು ಮುಂದಾದಾಗ ಅದು ಕೇಂದ್ರ ಸರಕಾರದ ಸಹಕಾರ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಅಲ್ಲಿ ಕೆಲವೊಂದು ನಿಯಮಗಳಿರುವುದರಿಂದ ಆದಷ್ಟು ಎಚ್ಚರಿಕೆಯಿಂದಲೇ ಬೇರೆ

ರಾಜ್ಯಗಳಲ್ಲಿ ಸಹಕಾರಿ ಸಂಘ ವಿಸ್ತರಿಸಬೇಕು ಎಂದು ಸಲಹೆ ನೀಡಿದರು. ಬಾಗಲಕೋಟೆ ಜಿಲ್ಲೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಅಪಾರ ಬೆಳವಣಿಗೆ ಆಗಿದೆ ಎಂದು ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿ, ಮನುಷ್ಯ ಎಷ್ಟೇ ಆರೋಗ್ಯವಂತ ಇದ್ದರೂ ಕಾಯಿಲೆ ಇದ್ದೆ ಇರುತ್ತದೆ. ಹಾಗೆಯೇ ಬಾಗಲಕೋಟಿ ಜಿಲ್ಲೆಯ ಅಲ್ಪಸಂಖ್ಯಾತ ಸಹಕಾರಿ ಸಂಸ್ಥೆ ಪ್ರಕರಣ ಗಮನಕ್ಕೆ ಬಂದಿದೆ. ಹಾಗೆಯೇ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಲ್ಲೂ ಸಿಪಾಯಿ ಮಾಡಿರುವ ಹಣದ ದುರ್ಬಳಕೆ ವಿಚಾರವಾಗಿ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅವನು ಸುಪ್ರೀಂಕೋರ್ಟ್‌ಗೆ ಹೋಗಿ ಜಾಮೀನು ತರುತ್ತಾನೆ ಎಂದರೆ ಎಷ್ಟು ಬಲಾಢ್ಯ ಇರಬೇಕು, ಪಾಸ್‌ವರ್ಡ್ ದುರ್ಬಳಕೆ ಮಾಡಿಕೊಂಡು ಹಣ ಬಳಸಿದ್ದಾನೆ. ಯಾರೇ ತಪ್ಪು ಮಾಡಿದ್ದರೂ ಕಾನೂನು ಪ್ರಕಾರ ಕ್ರಮ ಆಗಿಯೇ ಆಗುತ್ತದೆ ಎಂದರು.

ಬಾಪೂಜಿ ಸಹಕಾರಿಯ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಆರ್. ಪಾಟೀಲ ಇವರು ಸಭೆಯನ್ನು ಉದ್ದೇಶಿಸಿ ಸಹಕಾರಿ ಕ್ಷೇತ್ರ ಬಲಗೊಂಡಾಗ ಮಾತ್ರ ದೇಶ ಅಭಿವೃದ್ಧಿ ಪಥದತ್ತ ಸಾಗಲು ಸಾಧ್ಯ. ಜಿಲ್ಲೆಯ ಜನರಿಗೆ ಆರ್ಥಿಕವಾಗಿ ಸಹಾಯ ಮಾಡುವ ಉದ್ದೇಶದಿಂದ 2008 ರಲ್ಲಿ ಬಾಪೂಜಿ ಸಂಸ್ಥೆ ಪ್ರಾರಂಭಿಸಲಾಯಿತು. ಗ್ರಾಹಕರ ನಂಬಿಕೆ, ನಿರ್ದೇಶಕರ ಮಂಡಳಿ ಹಾಗೂ ಸಿಬ್ಬಂದಿಯ ಸೇವೆಯಿಂದಲೇ ಬಾಪೂಜಿ ಸಂಸ್ಥೆ ಇಂದು 61 ಶಾಖೆಗಳನ್ನು ಹೊಂದಿದ್ದು, ಮುಂದಿನ ದಿನಗಳಲ್ಲಿ ಪಕ್ಕದ ರಾಜ್ಯಗಳಲ್ಲೂ ಶಾಖೆಗಳನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು. ಸಹಕಾರ ಸಂಘಗಳನ್ನು ಸ್ಥಾಪಿಸಿರುವವರು ಬೆಳೆದು ದೊಡ್ಡವರಾಗದೇ, ಸಂಘಗಳನ್ನು ಸ್ಥಾಪಿಸಿದವರು ಬಡವರಿಗಾಗಿ ಹಾಗೂ ಅದನ್ನು ನಂಬಿದ ಗ್ರಾಹಕರು ಬೆಳೆದು ದೊಡ್ಡವಾರಗಬೇಕು ಎಂಬ ಯೋಚನೆಯಿಂದ ಬಾಪೂಜಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು. ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ಪಡೆದವರು ಸಾಲವನ್ನು ಸದುದ್ದೇಶಕ್ಕೆ ಬಳಸುವ ಮೂಲಕ ಸರಿಯಾಗಿ ಸಂಘಗಳಿಗೆ ಬಡ್ಡಿ ಸಮೇತರಾಗಿ ಕಟ್ಟಿದಾಗ ಮಾತ್ರ ಸಂಘಗಳು ಬೆಳೆಯುವ ಜೊತೆಗೆ ಅದರಿಂದ ಸಾಲ ಪಡೆದವರು ಸಹಿತ ಬೆಳೆಯಲು ಸಾಧ್ಯವಾಗುತ್ತದೆ. ಸಹಕಾರ ಸಂಘಗಳ ಯಶಸ್ವಿಗೆ ನಿರ್ದೇಶಕರು ಹಾಗೂ ಮಂಡಳಿಯಷ್ಟೇ ಪ್ರಮುಖವಾದ ಪಾತ್ರವನ್ನು ಸಿಬ್ಬಂದಿ ನಿರ್ವಹಿಸಿರುತ್ತಾರೆ. ಬರುವ ಗ್ರಾಹಕರ ಅಗತ್ಯತೆಗಳನ್ನು ಪೂರೈಸುವ ನೌಕರ–ರಿಂದಲೇ ಸಹಕಾರಿ ಸಂಘ ಯಶಸ್ವಿಯಾಗಿ ಮುನ್ನಡೆಯಲು ಸಾಧ್ಯ ಎಂದರು. ಸಹಕಾರಿಯು ರೂ. 1500 ಕೋಟಿ ಠೇವಣಿ ಸಂಗ್ರಹಿಸುವ ಹಾಗೂ ರೂ. 1200 ಕೋಟಿ ಸಾಲ ವಿತರಣೆ ಮಾಡಲು ಗುರಿ ಇರಿಸಲಾಗಿದೆ ಎಂದು ತಿಳಿಸಿದರು. ಸಂಸದರಾದ ಪಿ.ಸಿ ಗದ್ದಿಗೌಡರ ಮಾತನಾಡಿ ಎಸ್. ಆರ್. ಪಾಟೀಲರ ನೇತೃತ್ವದಲ್ಲಿ ಬಾಪೂಜಿ ಸೌಹಾರ್ದ ಸಹಕಾರಿ ಮುಂಚೂಣಿಯಲ್ಲಿದೆ, ಸಂಸ್ಥೆ ಇನ್ನಷ್ಟು ಸದೃಢವಾಗಿ ಬೆಳೆಯಲಿ ಎಂದು ಆಶಿಸಿದರು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹಾಗೂ ವಿವೇಕಾನಂದ ಮಹಾವಿದ್ಯಾಲಯ (ಸ್ವಾಯತ್ತ) ದ ನಡುವೆ ಸಹಕಾರ ಕ್ಷೇತ್ರದ ಅಧ್ಯಯನಕ್ಕಾಗಿ ಒಡಂಬಡಿಕೆ.




**ಪುತ್ತೂರು** : ಪುತ್ತೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿ ರಾಜ್ಯಾದ್ಯಂತ ಕಾರ್ಯಾಚರಿಸುತ್ತಿರುವ ಪ್ರತಿಷ್ಠಿತ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಹಾಗೂ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವೇಕಾನಂದ ಕಲಾ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯ (ಸ್ವಾಯತ್ತ) ದ ನಡುವೆ ಸಹಕಾರ ಕ್ಷೇತ್ರದ ಅಧ್ಯಯನಕ್ಕಾಗಿ ಒಡಂಬಡಿಕೆಯನ್ನು ದಿನಾಂಕ 12–06–2024ರಂದು ವಿವೇಕಾನಂದ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಮಾಡಿಕೊಳ್ಳಲಾಯಿತು. ವಿವೇಕಾನಂದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವಿ.ಜಿ ಭಟ್ ಹಾಗೂ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ ನಾಯಕ್ ಎ ಈ ಒಡಂಬಡಿಕೆಗೆ ಸಹಿ ಮಾಡಿದರು. ಈ ಸಂದರ್ಭದಲ್ಲಿ, ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ, ವಿವೇಕಾನಂದ ಕಾಲೇಜಿನ ಆಡಳಿತ ಸಮಿತಿ ಅಧ್ಯಕ್ಷರಾದ ಡಾ. ಶ್ರೀಪತಿ ಕಲ್ಲೂರಾಯ, ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ, ಪ್ರಭಾಕರ ಭಟ್ ಕಲ್ಲಡ್ಕ ಮತ್ತಿತರರು ಉಪಸ್ಥಿತರಿದ್ದರು.

# ನಾನು ಒಬ್ಬ ಬೆಳೆದರೆ ಆರ್ಥಿಕತೆ ಬೆಳವಣಿಗೆ, ಜೊತೆಯವರನ್ನು ಬೆಳೆಸಿದರೆ ಸಾರ್ಥಕತೆ ಬೆಳವಣಿಗೆ

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು, ಕರಾಸೌಸಂಸನಿ., ಕಲಬುರಗಿ.




ಇಂದಿನ ಯುಗದಲ್ಲಿ ಜಗತಿನಾದ್ಯಂತ ಮಾನವ ಪರಸ್ಪರ ಸಹಕಾರದೊಂದಿಗೆ ನಡೆಸುವ ಜೀವನ ಪದ್ಧತಿಯಿಂದ ವಿಮುಖನಾಗಿ ಹಣಕಾಸಿನಿಂದ ಎಲ್ಲವನ್ನು ಪಡೆಯುವೆ ಎನ್ನುವ ಸಂಕುಚಿತ ಮನೋಭಾವದಿಂದ ಸೀಮಿತ ಜನರು ಹಾಗೂ ಸೀಮಿತ ಭಾವನೆಯೊಂದಿಗೆ ವಯ್ಯಕ್ತಿಕವಾಗಿ ಆರ್ಥಿಕ ಬೆಳವಣಿಗೆಯನ್ನು ಹೊಂದಿದರು ಸಹ ಸಾರ್ಥಕತೆ ಪಡೆಯುತ್ತಿಲ್ಲ. ಜೊತೆಯವರನ್ನು ಬೆಳಸಿದರೆ ಮಾತ್ರ ಸಾರ್ಥಕತೆ ಭಾವ ಹೊಂದಲು ಸಾಧ್ಯ. ಇದರ ಸಾರಂಶವೇ ಈ ವರ್ಷದ ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯ ಧ್ಯೆಯ ವಾಕ್ಯ "ಸಹಕಾರಿಗಳು ಎಲ್ಲರಿಗೂ ಉತ್ತಮ ಭವಿಷ್ಯವನ್ನು ನಿರ್ಮಿಸಿ"

### ಸಹಕಾರಿಗಳ ಅಂತರಾಷ್ಟ್ರೀಯ ದಿನದ ಇತಿಹಾಸ

ಸಹಕಾರಿಗಳ ಅಂತರರಾಷ್ಟ್ರೀಯ ದಿನವನ್ನು ಶ್ರೀಮಂತ ಇತಿಹಾಸವನ್ನು ಹೊಂದಿದೆ, ಅದರ ಬೇರುಗಳು ಒಂದು ಶತಮಾನದಷ್ಟು ಹಿಂದಿನದು, ಸಹಕಾರಿ ಚಳುವಳಿಯು 19 ನೇ ಶತಮಾನದ ಮಧ್ಯಭಾಗದಲ್ಲಿ ಹೊರಹೊಮ್ಮಿತು, ಇಂಗ್ಲೆಂಡ್‌ನ ರಾಕಡೇಲ್ ಪಯೋನಿಯರ್ಸ್ (1844) ನಂತಹ ಪ್ರವರ್ತಕರ ಪ್ರಯತ್ನಗಳೊಂದಿಗೆ ಪ್ರಜಾಪ್ರಭುತ್ವ ಆಡಳಿತ ಮತ್ತು ಆರ್ಥಿಕ ನ್ಯಾಯಸಮ್ಮತ ತತ್ವಗಳ ಆಧಾರದ ಮೇಲೆ ಸ್ಥಾಪಿಸಲಾಯಿತು. ಇವುಗಳ ಪ್ರೇರಣೆಯಿಂದಾಗಿ 19 ನೇ ಶತಮಾನದ ಕೊನೆಯಲ್ಲಿ ಮತ್ತು 20 ನೇ ಶತಮಾನದ ಆರಂಭದಲ್ಲಿ, ಸಹಕಾರಿಗಳು ಕೃಷಿ, ಗ್ರಾಹಕ ಸರಕುಗಳು ಮತ್ತು ಸಾಲ ಒಕ್ಕೂಟಗಳಂತಹ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಹರಡಿ ಪ್ರಪಂಚದಾದ್ಯಂತದ ಸಮುದಾಯಗಳ ಮೇಲೆ ಪ್ರಭಾವ ಬೀರಿತು. ಇದನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪ್ರೇರಣಾತ್ಮಕವಾಗಿ ಕಾರ್ಯನಿರ್ವಹಿಸಲು ಹಾಗೂ ಜನಸಾಮಾನ್ಯರು ಸಹಕಾರ ಕ್ಷೇತ್ರದಲ್ಲಿ ಸಕ್ರೀಯವಾಗಿ ಭಾಗವಹಿಸುವಿಕೆಗಾಗಿ ಒಂದು ದಿನ ಸಹಕಾರ ದಿನಾಚರಣೆ ಆಚರಣೆಯ ಕೂಗು ಜಗತ್ತಿನಾದ್ಯಂತ ಕೇಳಿಬಂದಿತ್ತು.

### ಅಂತರಾಷ್ಟ್ರೀಯ ಸಹಕಾರ ದಿನದ ಜನನ (1923)

ಸನ್ 1922 ರಲ್ಲಿ, ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿ ನಡೆದ 12 ನೇ ಅಂತರರಾಷ್ಟ್ರೀಯ ಸಹಕಾರಿ ಕಾಂಗ್ರೆಸ್‌ನಲ್ಲಿ, ಅಂತರರಾಷ್ಟ್ರೀಯ ಸಹಕಾರ ಒಕ್ಕೂಟ (ICA) ಜಾಗತಿಕವಾಗಿ ಸಹಕಾರಿಗಳನ್ನು ಆಚರಿಸಲು ನಿರ್ದಿಷ್ಟ ದಿನವನ್ನು ಸ್ಥಾಪಿಸಲು ಪ್ರಸ್ತಾಪಿಸಿತು. ಸದರಿ ಸಲಹೆಯನ್ನು ಸ್ವೀಕರಿಸಲಾಯಿತು, ಮತ್ತು ಕಾಂಗ್ರೆಸ್ ಸರ್ವಾನುಮತದಿಂದ ಪ್ರತಿವರ್ಷ ಜುಲೈ ಮಾಹೆಯ ಮೊದಲ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನವನ್ನಾಗಿ ಮೀಸಲಿಡಲು ನಿರ್ಧರಿಸಿತು, ಆದರೆ ಏಳು ದಶಕಗಳಿಗೂ ಹೆಚ್ಚು ಕಾಲ, ಅಂತರಾಷ್ಟ್ರೀಯ ಸಹಕಾರಿ ದಿನವು ಪ್ರಾಥಮಿಕವಾಗಿ ಸಹಕಾರ ಚಳುವಳಿಯಲ್ಲಿ ಆಂತರಿಕ ಆಚರಣೆಗೆ ಸೀಮೀತವಾಗಿತ್ತು. ಅಂತರಾಷ್ಟ್ರೀಯ ಸಹಕಾರಿ ದಿನದ ಮಹತ್ವದ ಕುರಿತು ಅಂತರಾಷ್ಟ್ರೀಯವಾಗಿ ಕೂಗು ಮತ್ತೆ ಪ್ರತಿಧ್ವನಿಸಿತು, ಕೂಗು ಹೆಚ್ಚಾದಂತೆ ಸನ್ 1992 ರಲ್ಲಿ ಜರುಗಿದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಂಡಿಸಿದಾಗ ಸಭೆಯು 47/90 ನಿರ್ಣಯವನ್ನು ಅಂಗೀಕರಿಸುವ ಮೂಲಕ ಅಧಿಕೃತವಾಗಿ ಅಂತರಾಷ್ಟ್ರೀಯ ಸಹಕಾರಿ ದಿನವನ್ನು ಗುರುತಿಸಿತು. ಈ ಅಂಗೀಕಾರವು ಜಾಗತಿಕ ವ್ಯಾಪ್ತಿಯನ್ನು ಮತ್ತು ಪ್ರಭಾವವನ್ನು ಮತ್ತಷ್ಟು ವರ್ಧಿಸಿತು, ಇದನ್ನು ಸರ್ಕಾರಗಳು, ನಾಗರೀಕ ಸಮಾಜ. ಸಂಘ ಸಂಸ್ಥೆಗಳು ಇತ್ಯಾದಿಗಳಲ್ಲಿ ವ್ಯಾಪಕವಾಗಿ ಸಾರ್ವಜನಿಕರ ಗಮನಕ್ಕೆ ಬಂದಿರುತ್ತವೆ.

### ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯ ಮಹತ್ವ

- ಕೃಷಿ ಮತ್ತು ಹಣಕಾಸುದಿಂದ ಆರೋಗ್ಯ ಮತ್ತು ವಸತಿವರೆಗೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರಿ ಸಂಸ್ಥೆಗಳು ಮತ್ತು ಅದರ ಸದಸ್ಯರ ಕೊಡುಗೆಗಳನ್ನು ಅಂಗೀಕರಿಸಲು ಮೀಸಲಾದ ವೇದಿಕೆಯನ್ನು ಒದಗಿಸುತ್ತದೆ.
- ಒಗ್ಗಟ್ಟು ಮತ್ತು ಏಕತೆಯನ್ನು ಬಲಪಡಿಸುವುದು: ದಿನವು ಸಹಕಾ–ರಿಗಳ ನಡುವೆ ಜಾಗತಿಕ ಸಮುದಾಯದ ಪ್ರಜ್ಞೆಯನ್ನು ಬೆಳೆಸುತ್ತದೆ, ವಿವಿಧ ದೇಶಗಳು ಮತ್ತು ವಲಯಗಳಲ್ಲಿ ಸದಸ್ಯರನ್ನು ಸಂಪರ್ಕಿಸುತ್ತದೆ ಮತ್ತು ಸಹಯೋಗ ಮತ್ತು ಜ್ಞಾನ ಹಂಚಿಕೆಯನ್ನು ಉತ್ತೇಜಿಸುತ್ತದೆ. ಇದರಿಂದ ಒಗ್ಗಟ್ಟು ಮತ್ತು ಏಕತೆಯನ್ನು ಬಲಪಡಿಸುವುದು.
- ಸಹಕಾರಿಗಳ ಸಾಧನೆಗಳನ್ನು ಆಚರಿಸುವುದು ಸದಸ್ಯರನ್ನು ಪ್ರೇರೇಪಿಸುತ್ತದೆ ಮತ್ತು ತಮ್ಮನ್ನು ಮತ್ತು ಅವರ ಸಮುದಾಯಗಳಿಗೆ ಉತ್ತಮ ಭವಿಷ್ಯವನ್ನು ನಿರ್ಮಿಸುವಲ್ಲಿ ಅವರ ಕೆಲಸವನ್ನು ಮುಂದುವರಿಸಲು ಅವರನ್ನು ಪ್ರೇರೇಪಿಸುತ್ತದೆ. ಇದರಿಂದ ಸಹಕಾ–ರಿಗಳಲ್ಲಿ ನೈತಿಕತೆ ಮತ್ತು ಪ್ರೇರಣೆಯನ್ನು ಹೆಚ್ಚಿಸುವುದು.
- ವ್ಯಕ್ತಿಗಳನ್ನು ಸಬಲೀಕರಣಗೊಳಿಸಲು, ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಲು ಸಹಕಾರಿಗಳ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ, (ವಿಶೇಷವಾಗಿ ಹಿಂದುಳಿದ ಪ್ರದೇಶಗಳಲ್ಲಿ)
- ಸಹಕಾರಿಗಳ ವೈವಿಧ್ಯಮಯ ರೂಪಗಳು ಮತ್ತು ಪ್ರಯೋಜನಗಳ

೩೫ನೇ ಪುಟಕ್ಕೆ.....

# ಸಾಧನೆಯ ಉರುಗೋಲು

– ಶ್ರೀ ಧೀರೇಂದ್ರ ನಾಗರಹಳ್ಳಿ

ಇದು ಒಂದು ದಶಕದ ಹಿಂದಿನ ಕಥೆ ! ಸೋಲು ನನ್ನನ್ನು ಎಡಬಿಡದೆ ಕಾಡಿತ್ತು. ಒಂದೇ ಎರಡೇ ಸಾಲು ...ಸಾಲು ಸೋಲುಗಳು. ಕೇವಲ 'ಸೋಲು' ಎನ್ನುವುದಾಗಿದ್ದರೆ ಇರಲಿ ಬಿಡು ಎಂದು ನಡೆದು ಬಿಡುತ್ತಿದ್ದೆ. ಆದರೆ ಆ ಸೋಲುಗಳು ನನ್ನನ್ನು ಆಡಿಕೊಂಡು ನಗುತ್ತಿರುವವರ ಮುಂದೆ ಮುಗ್ಗರಿಸಿ ಬೀಳುವಂತೆ ಮಾಡಿದ್ದವು. ಅದಷ್ಟೆ ಅಲ್ಲದೆ ಆ ಸೋಲುಗಳು ಮೇಲೆಳಲು ಕೈಗೆಟುಕವಂತೆ ಇದ್ದ ಎಲ್ಲಾ ಆಸರೆಗಳನ್ನು ನನ್ನ ಕಣ್ಣೆದುರೆ ಮಣ್ಣು ಮಾಡಿತ್ತು . ಆದರೂ ನನಗೆ ಗೆಲವು ಮುಖ್ಯವಾಗಿತ್ತು, ನಾನು ಗೆಲ್ಲಲೇ ಬೇಕಾಗಿತ್ತು.ಪ್ರತಿ ಬಾರಿಯು ನಾನು ಕೆಳಗೆ ಬಿದ್ದು ಮೇಲೇಳಲು ಒದ್ದಾಡುತಿದ್ದೆ. ಆ ಒದ್ದಾಟದ ವಿಷಮ ಪರಿಸ್ಥಿತಿಯಲ್ಲಿ ನನ್ನನ್ನು ಕೈ ಹಿಡಿದು ಮೇಲೆತ್ತಿದ್ದು "ಸೋಲನ್ನು ಒಪ್ಪಿಕೊಳ್ಳಬಾರದು" ಎನ್ನುವಂತೆ ಬದುಕಿದ ಚಾರ್ಲಿಚಾಪ್ಲಿನ್.

ಅಹರ್ನಿಷ , ಅನಾಯಸ, ಅಯಾಚಿತವಾಗಿ
ಕಾಡುತ್ತಿತ್ತು ಹೀನಾಯ ಸೋಲು,
ಎದ್ದೇಳುವ ಛಲದಲ್ಲಿಯೆ ಕಾದು ಕುಳಿತು ಹೊಂಚು ಹಾಕಿ
ಕೆಡವುತ್ತಿತ್ತು ಬದುಕು!
ಜಗವೆಲ್ಲಾ ನಗುತ್ತಿತ್ತು ಆದರೆ ಮನಸ್ಸು ಗಳಗಳನೆ ಅಳುತ್ತಿತ್ತು!
ಆದರೂ ಮಳೆಯಲ್ಲಿಯೆ ಕಾಲೆಳೆದುಕೊಂಡು ನಡೆದು ಬಿಟ್ಟ
ಕಣ್ಣೀರು ಕಾಣದಿರಲೆಂದು!

"I always like walking in the rain, so no one can see me crying."

**— Charlie Chaplin**

ನನ್ನ ಪರಿಸ್ಥಿತಿಯು ಚಾಪ್ಲಿನ್ ಗಿಂತಲೂ ಯಾವುದೇ ಕೋನದಿಂದಲೂ ಭಿನ್ನವಿರಲಿಲ್ಲ. ಕಣ್ತುಂಬಾ ನೀರಿತ್ತು, ಮನಸ್ಸಿನೊಳಗೆ ನೋವು ತುಂಬಿತ್ತು, ಜೀವವೇ ಉಡುಗಿ ಹೋಗಿತ್ತು. ಆದರೆ ನನಗೆ ಒಂದು ಸಣ್ಣಾತಿ ಸಣ್ಣದೆನ್ನುವ ಗೆಲುವ ಬೇಕಾಗಿತ್ತು. ಹೌದು, ಆ ಒಂದು ದುರ್ಧರ ಪರಿಸ್ಥಿತಿಯಲ್ಲಿ ನೆನಗೆ 'ಗೆಲುವು' ಎನ್ನುವ ಶಬ್ದ ಸಾಕಾಗಿತ್ತು.ಕಾರಣ, ಆ ಒಂದು ಶಬ್ದವನ್ನೇ ನಾನು 'Launch pad' ಮಾಡಿಕೊಂಡು ಆಕಾಶದೆತ್ತರಕ್ಕೆ ಹಾರಬಲ್ಲೆ ಎನ್ನುವ ಅದಮ್ಯ ಆತ್ಮವಿಶ್ವಾಸ ನನ್ನಲಿತ್ತು.

ಈ ಸೋಲುಗಳೇನೆಂದು ಕೇಳುತ್ತಿರಾ? ಒಂದೇ, ಎರಡೇ– ಅವುಗಳ ಬಗ್ಗೆ ಬರೆದರೆ ಅದೊಂದು ದೊಡ್ಡ ಕಾದಂಬರಿಯೇ ಆದೀತು.ಇದು ಸೂಲುಗಳ ಬಗ್ಗೆ ಮಾತಾಡುವ ಸಮಯವಲ್ಲ. ಆದರೆ ಸೋಲಿನಿಂದ ಕಲಿತ ಪಾಠವನ್ನು ಹೇಗೆ ಬಳಿಸಿಕೊಳ್ಳುತ್ತೇವೆ ಮತ್ತು ಹೇಗೆ ಮೇಲೇಳುತ್ತೇವೆ ಎನ್ನುವುದರ ಕುರಿತಾಗಿದೆ. ಇರಲಿ ಒಂದೇ ಒಂದು ಸೋಲನ್ನು ಇಲ್ಲಿ ಹೇಳುತ್ತೇನೆ. ನಾನು ಹಿಂದಿನ ಎಲ್ಲಾ ಸೋಲುಗಳನ್ನೆಲ್ಲಾ ದಾಟಿ ಆಗ UPSC ಗೆ Prepare ಆಗ್ತಾ ಇದ್ದ ಸಮಯ. ಒಂದಾದ ಮೇಲೆ ಒಂದರಂತೆ Attemptಗಳನ್ನು ಕಳೆದುಕೊಳ್ಳುತ್ತಲೆ ಇದ್ದೆ ಮತ್ತು ವಯಸ್ಸು ಸಹಾ ಏರುತ್ತಲೇ ಇತ್ತು. ಆ ಸಂದರ್ಭದಲ್ಲಿ ಮನೆಯ ಪರಿಸ್ಥಿತಿಯ ಹೇಳಿಕೊಳ್ಳವಂತಿರಲಿಲ್ಲ. ಈ ಗಕಖಅಅನ್ನು ಬಿಟ್ಟು ಬೇರೆ ಏನಾದರೂ ಪ್ರಯತ್ನಿಸಿದ್ದರೆ ಒಂದು ಅಚ್ಚುಕಟ್ಟಾದ ಕೆಲಸ ನೋಡಿಕೊಂಡು ಆರಾಮಾಗೆ ಇರಬಹುದಾಗಿತ್ತು.ಆದರೆ ನಾನು ಕೈ ಹಾಕಿದ್ದು UPSC ಗೆ! ಅದು ಸುಲಭಕ್ಕೆ ದಕ್ಕುವದಲ್ಲ. ನನ್ನ ನೋವೆ ನನಗಾಗಿತ್ತು. ಆದರೆ ಹಳ್ಳಕ್ಕೆ ಬಿದ್ದಾಗ ಆಳಿಗೊಂದು ಕಲ್ಲು ಎನ್ನುವಂತೆ.ಹಾದಿ–ಬೀದಿಯವರೆಲ್ಲಾ ನನ್ನ ಆಡಿಕೊಂಡು ನಗುವುದಕ್ಕೆ ಶುರಮಾಡಿದರು. ಅದು ಕೊನೆಯ ಪ್ರಯತ್ನ ಗೆದ್ದರೆ ಗದ್ದುಗೆ ಸೋತರೆ ನೂರು ಸೋಲುಗಳ ಮಧ್ಯೆ ಅದೊಂದು ಎಂದು ಅವಡುಗಚ್ಚಿ ಕುಳಿತೆ. ಹಿಂದಿನ ಎಲ್ಲಾ ಸೋಲುಗಳ ನಂತರವೂ ನಾನು ಒಮ್ಮೆ ಗೆದ್ದು ಬಿಟ್ಟೆ ನೋಡಿ ಹಂಗಿಸಿದವರು, ಅವಮಾನಿಸಿದವರು, ಕಡೆಗಣಿಸಿದವರು ಇನ್ನೇನು ಇವನ ಕಥೆ ಮುಗಿಯಿತು ಎಂದವರು ಎಲ್ಲರೂ ತಿರುಗಿ ನೋಡಿದ್ದರು. ನನಗೆ ದಕ್ಕಿದ್ದ ಆ ಗೆಲವು ಹಾಗಿತ್ತು !

ಆ ಗೆಲುವಿನ ಮಂತ್ರವೇ 'ನಿರಂತರ ಪ್ರಯತ್ನ' , ಮನದೊಳಗಿರುವ ಗೆಲ್ಲುವ ಹಟದ ಜ್ವಾಲಾಮುಖಿ ಮತ್ತು ನಿದ್ರೆಯೇ ಮಾಡದಂತೆ ಮಾಡಿದ ನನ್ನದೇ ಕನಸುಗಳು.

ಇರಲಿ, ಅದರ ಮಾತೆಲ್ಲಾ ಆಮೇಲೆ. ಆದರೆ ಪ್ರತಿ ಬಾರಿಯೂ ನಾನು ಸೋತಾಗ ಈ ಸೋಲೆನ್ನುವುದನ್ನು ಬರಸೆಳೆದು, ಬಿಗದಪ್ಪಿ, ಒಪ್ಪಿದೆ. ಪ್ರತಿ ಸೋಲಿನಿಂದಲೂ ಒಂದೊಂದು ಪಾಠವನ್ನು ಕಲಿತೆ. ಮೊದ–ಮೊದಲು ಕ್ಷುಲ್ಲಕ ಎನ್ನುವಂತಹ ತಪ್ಪುಗಳನ್ನು ಮಾಡಿದೆ.ಅದರೆ ನಂತರದಲ್ಲಿ ಈ ಸಣ್ಣ ತಪ್ಪುಗಳನ್ನು ಅಪ್ಪಿ–ತಪ್ಪಿಯೂ ಮಾಡದಂತೆ ಜಾಗೂರಕತೆ ವಹಿಸಿದೆ.ಪ್ರತಿ ವಿಫಲ ಪ್ರಯತ್ನವು ನನಗೆ ಒಂದೊಂದು ಪಾಠವನ್ನು ಕಲಿಸಿತ್ತು.ಆ ಪಾಠಗಳನ್ನೆ ಮೆಟ್ಟಿಲುಗಳನ್ನು ಮಾಡಿಕೊಂಡೆ ಮತ್ತು ಪ್ರಯತ್ನವನ್ನು ಮುಂದುವರೆಸಿದೆ.

ಈ ಪ್ರಯತ್ನದಲ್ಲಿ ಸಹನೆ ಎನ್ನುವುದು ಹೇಗಿರಬೇಕು ಎನ್ನುವುದಕ್ಕೆ ನನಗೆ ಸ್ಪೂರ್ತಿಯಾಗಿದ್ದು, ರೈತ!!!

ರೈತ ಪ್ರತಿ ಮಳೆಗಾಲದ ಹೊತ್ತಿಗೆ ಬೀಜವನ್ನು ಬಿತ್ತುವನು ! ಅವನಿಗೆ ಗೊತ್ತು ತಾನು ಬಿತ್ತುವ ಬೀಜವು ನಾಳೆಯೆ ಫಲ ಕೊಡುವುದಿಲ್ಲವೆಂದು. ಅಷ್ಟೇ ಅಲ್ಲ ಬಿತ್ತಿದ ಅದೆಷ್ಟೊ ಬೀಜಗಳನ್ನು ಪ್ರಾಣಿ–ಪಕ್ಷಿ ತಿಂದು ಹಾಕುವವು, ಇನ್ನೊಂದಿಷ್ಟು ಮೊಳಕೆಯಾಗದೆ ಮುರುಟಿ ಹೋಗುವವು, ಇನ್ನೂ ಕೆಲವು ಹುಲುಸಾಗಿ ಬೆಳೆದು ಹಸಿರಾಗಿ ಬೆಳಗಿದರೂ ಫಲವಿಲ್ಲದೆ ಹಸಿರು ಬರವಾಗುವವು.ಆದರೆ ರೈತನಿಗೆ ಗೊತ್ತು ಭೂಮಿಯ ಸಾರವನ್ನೆಲ್ಲಾ ಹೀರಿ

ಗರ್ಭ ಸೀಳಿ ಹೊರಬರುವ ಆ ಫಸಲು ಅಕ್ಷಯವಾಗುವುದು ಎಂದು. ಹಾಗಾಗಿ ಉತ್ತಿ–ಬಿತ್ತಿದ ಬೀಜಗಳೆಲ್ಲವೂ ಫಲವಾಗಿ ಬೆಳಗಲು ತಿಂಗಳುಗಟ್ಟಲೇ ತಾಳ್ಮೆಯಿಂದ ಕಾಯುತಿರುವ.ಆ ಬೀಜಗಳು ಹಾಗೆಯೆ ಸುಮ್ಮನೆ ಭೂಮಿಯಿಂದ ಹೊರಬರುವುದಿಲ್ಲ ಅವುಗಳಿಗೂ ಹೋರಾಟವಿದೆ. ಪ್ರಕೃತಿಯೊಂದಿಗೆ ಹೋರಾಟ, ಪ್ರಾಣಿ–ಪಕ್ಷಿಗಳೊಂದಿಗೆ ಹೋರಾಟ ಕೊನೆಗೆ ಸಸಿಯಾಗಿ ಫಲವಾಗಲು ಭೂಮಿಯನು ಸೀಳಿ ಹೊರಬರಲೂ ಹೋರಾಟ.

ಇದು ತಾಳ್ಮೆ ಮತ್ತು ಹೋರಾಟ ಏನು ಅನ್ನುವುದಕ್ಕೆ ನನ್ನ ಕಣ್ಣಿನ ಮುಂದೆ ಇದ್ದ ಒಂದು 'Classic' ಎನ್ನುವಂತಹ ಉದಾಹರಣೆ.

ನನ್ನಲ್ಲಿ ಸೋಲುಗಳಿದ್ದವು .ಆದರೆ ನಾನು ಹೀಗೆಯೇ ಆಗಬೇಕು ಎಂದು ಸಂಕಲ್ಪಿಸಿದ್ದೆ ಮತ್ತು ಕೊನೆಗೆ ನಾನು ಬಯಸಿದ್ದನ್ನು ಪಡೆದೆ. ನಾವು ಏನು ಅಂದುಕೊಳ್ಳುತ್ತೇವೆಯೊ ಅಥವಾ ಬಯಸುತ್ತೇವೆಯೊ ಅದನ್ನು ಆಗುತ್ತೇವೆ ಅಥವಾ ಪಡೆದೆ ತಿರುತ್ತೇವೆ .ಹಾಗಾಗಿ ನಮ್ಮ ವೀರ ಸನ್ಯಾಸಿ ವಿವೇಕಾನಂದರು ಹೇಳಿದ ಈ ಮಾತನ್ನು ಕೇಳಿ:

" Take up one idea,Make that one idea your life – think of it, dream of it, live on that idea. Let the brain, muscles, nerves, every part of your body, be full of that idea and just leave every other idea alone.This is the way to success." ಇದರ ಅರ್ಥ ಸಂಕಲ್ಪದಂತೆ ಸಿದ್ಧಿ . ಇದನ್ನೆ ಈಗೀಗ 'Law of manifestation' ಎಂದು ಕರೆಯುತ್ತಾರೆ.'Law of manifestation' ಪ್ರಕಾರ ನಮ್ಮ ಆಲೋಚನೆಗಳು ಮತ್ತು ಭಾವನೆಗಳೆ ನಮ್ಮನ್ನು ರೂಪಿಸುತ್ತವೆ.ಅಂದರೆ ನಾವು ಯಾವ ದಿಕ್ಕಿನಲ್ಲಿ ಅಲೋಚಿಸುತ್ತೇವೆ ಅದೇ ದಿಕ್ಕಿನಲ್ಲಿ ನಾವು ಕಾರ್ಯ ಪ್ರವೃತ್ತರಾಗುತ್ತೇವೆ.

ತರ್ಕ ಬದ್ಧವಾದ ಅಲೋಚನೆ, ನಿರಂತರ ಪ್ರಯತ್ನ ಮತ್ತು ಕಲಿತಿರುವುದನ್ನು ಸಮಯ ಮತ್ತು ಸಂದರ್ಭಕ್ಕನಗುಣವಾಗಿ ಬಳಸಿಕೊಳ್ಳುವ ಚಾಣಾಕ್ಷತೆ ಇವೆಲ್ಲವೂ ಯಶಸ್ಸಿನ ಮೂಲ ಮಂತ್ರಗಳು.ಇವೆಲ್ಲವನ್ನೂ ನಾವು ಒಂದೇ ದಿನಕ್ಕೆ ಕರಗತ ಮಾಡಿಕೊಳ್ಳಲು ಸಾಧ್ಯವೇ ಇಲ್ಲ.ಇದೊಂದು ನಿರಂತರ ಸಾಧನೆ ಮತ್ತು ತಪಸ್ಸು.ನಮ್ಮ ಮಾಜಿ ರಾಷ್ಟ್ರಪತಿ ದಿವಂಗತ ಂ.ಕೆ.ಎ.ಅಬ್ದುಲ ಕಲಾಂ ಅವರ ಈ ನುಡಿಮುತ್ತುಗಳನ್ನು ಪ್ರತಿ ರಾತ್ರಿ ನಿದ್ದೆಗೆ ಮೊದಲು ಓದಿಕೊಂಡು ಮಲಗುತ್ತಿದ್ದೆ.

"Excellence ಎನ್ನುವುದು ಒಂದು ನಿರಂತರ ಪ್ರಕ್ರಿಯೆ. ನೀವು Perfect ಆಗಬೇಕಾದರೆ ನಿರಂತರ ಪ್ರಯತ್ನಿಸಬೇಕು"

"Dream...Dream...ನಿರಂತರವಾಗಿ ಕನಸು ಕಾಣಿರಿ.ನಿಮ್ಮೆಲ್ಲಾ ಕನಸುಗಳು ನಿಮ್ಮ ಯೋಚನೆಗಳಾಗಿ ಒಂದಲ್ಲ ಒಂದು ದಿನ ನನಸಾಗುತ್ತವೆ"

---

.....33ನೇ ಪುಟದಿಂದ

ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡುತ್ತದೆ, ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯಸಮ್ಮತೆ ಮತ್ತು ಪರಿಸರ ಸುಸ್ಥಿರತೆಯ ಮೇಲೆ ಅವರ ಸಕಾರಾತ್ಮಕ ಪರಿಣಾಮವನ್ನು ಪ್ರದರ್ಶಿಸುತ್ತ ಜಾಗೃತಿ ಮೂಡಿಸುವುದು.

- ಬಡತನ, ಹಸಿವು, ಹವಾಮಾನ ಬದಲಾವಣೆ ಮತ್ತು ಅಸಮಾನತೆಯಂತಹ ನಿರ್ಣಾಯಕ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಸಹಕಾರಿಗಳ ಪಾತ್ರವನ್ನು ಒತ್ತಿಹೇಳುತ್ತದೆ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಅವರ ಕೊಡುಗೆಯನ್ನು ಪ್ರದರ್ಶಿಸುತ್ತ ಜಾಗತಿಕ ಸವಾಲುಗಳನ್ನು ಪರಿಹರಿಸುವುದು.
- ಸಹಕಾರಿ ಸಂಸ್ಥೆಗಳು, ಪ್ರಜಾಪ್ರಭುತ್ವದ ಆಡಳಿತ ಮತ್ತು ಸಮುದಾಯದ ಯೋಗಕ್ಷೇಮದ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿ, ನೈತಿಕ ಮೌಲ್ಯಗಳು ಮತ್ತು ಪರಿಸರದ ಜವಾಬ್ದಾ–ರಿಯನ್ನು ಆದ್ಯತೆ ನೀಡುವ ಆರ್ಥಿಕ ಅಭಿವೃದ್ಧಿಯ ಪರ್ಯಾಯ ಮಾದರಿಯನ್ನು ನೀಡುತ್ತ ನೈತಿಕ ಮತ್ತು ಸಮರ್ಥನೀಯ ಅಭ್ಯಾಸಗಳನ್ನು ಉತ್ತೇಜಿಸುವುದು.
- ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಸಬಲೀಕರಣಗೊಳಿಸಲು ಸಹಕಾರಿಗಳ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ, ಅವರ ಭವಿಷ್ಯವನ್ನು ರೂಪಿಸುವಲ್ಲಿ ಅವರಿಗೆ ಧ್ವನಿ ಮತ್ತು ಮಾಲೀಕತ್ವವನ್ನು ನೀಡಿ, ಸಹಕಾರ ಕ್ಷೇತ್ರದಲ್ಲಿ ಭಾಗವಹಿಸುವಿಕೆ ಮತ್ತು ಸಬಲೀಕರಣವನ್ನು ಪ್ರೋತ್ಸಾಹಿಸುವುದು.

### ಜುಲೈ 6, 2024 ವಿಶೇಷ ದಿನ

ವಿಶ್ವಸಂಸ್ಥೆಯು ಸಹಕಾರಿಗಳ ಅಂತರರಾಷ್ಟ್ರೀಯ ದಿನವನ್ನು ಸ್ಮರಿಸುವಾಗ ಒಗ್ಗಟ್ಟಿನ ಮಹತ್ವವನ್ನು ಹೊಂದಿದೆ. ವಾರ್ಷಿಕವಾಗಿ ಜುಲೈ ಮೊದಲ ಶನಿವಾರದ ಸಾಂಕೇತಿಕವಾಗಿ, ಈ ಆಚರಣೆಯು 1995 ರಿಂದ ವಿಶ್ವಾದ್ಯಂತ ಜೀವನೋಪಾಯವನ್ನು ಉಳಿಸಿಕೊಳ್ಳುವಲ್ಲಿ ಸಹಕಾರಿ ಉದ್ಯಮಗಳ ಪಾತ್ರವನ್ನು ಆಚರಿಸುತ್ತದೆ. ಸಮಯೋಚಿತವಾಗಿ ಸಮಯವನ್ನು ಒದಗಿಸುತ್ತದೆ. ಸಾಮಾಜಿಕ–ಆರ್ಥಿಕ ಸಮಾನತೆ ಮತ್ತು ಸಮುದಾಯದ ಬೆಳವಣಿಗೆಗೆ ವೇಗವರ್ಧಕದಲ್ಲಿ 'ನಾವು ಶಕ್ತಿ'ಯನ್ನು ಗುರುತಿಸಿ. ಪ್ರತಿವರ್ಷ ಸಹಕಾರಿ ಸಂಸ್ಥೆಗಳು ರಾಷ್ಟ್ರಗಳಾದ್ಯಂತ ಒಂದಾಗುತ್ತಿದ್ದಂತೆ, ಸಂದೇಶವು ಸ್ಪಷ್ಟವಾಗಿ ಪ್ರತಿಧ್ವನಿಸುತ್ತದೆ – ಸಹಕಾರವು ಹಂಚಿಕೆಯ ಸಮೃದ್ಧಿಯ ಹಾದಿಯನ್ನು ಸುಗಮಗೊಳಿಸುತ್ತದೆ. ಈ ವರ್ಷ ಜುಲೈ 6 ಶನಿವಾರರಂದು, ಪ್ರಪಂಚದಾದ್ಯಂತದ ಸಹಕಾರಿಗಳು "ಸಹಕಾರಿಗಳು ಎಲ್ಲರಿಗೂ ಉತ್ತಮ ಭವಿಷ್ಯವನ್ನು ನಿರ್ಮಿಸಿ" ಎಂಬ ವಿಷಯದೊಂದಿಗೆ ಸಹಕಾರಿಗಳ ಅಂತರರಾಷ್ಟ್ರೀಯ ದಿನವನ್ನು ಆಚರಿಸುತ್ತವೆ. 2030 ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಅನುಷ್ಠಾನಗೊಳಿಸುವ ಪ್ರಯತ್ನಗಳನ್ನು ವೇಗಗೊಳಿಸಿ, ಸುಸ್ಥಿರ ಭವಿಷ್ಯವನ್ನು ನಿರ್ಮಿಸಲು ತಮ್ಮ ಪ್ರಸ್ತುತ ಮತ್ತು ಐತಿಹಾಸಿಕ ಕೊಡುಗೆಗಳನ್ನು ಪ್ರದರ್ಶಿಸಲು ಸಹಕಾರಿಗಳಿಗೆ ಅವಕಾಶವಿದೆ. ಆದ್ದರಿಂದ ನಾವೆಲ್ಲ

ಅಂತರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ಪರಿಣಾಮಕಾರಿಯಾಗಿ ಆಚರಿಸುವುದರ ಮುಖಾಂತರ ಸಹಕಾರ ಚಳುವಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸೇರ್ಪಡೆಯಾದಾಗ ದಿನಾಚರಣೆಗೆ ಮಹತ್ವ ಮತ್ತು ಸಾರ್ಥಕತೆ ಉಂಟಾಗುವುದು.

# ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಮತ್ತು ನಿರ್ದೇಶಕರ ಪಾತ್ರ

**– ಶ್ರೀ ಹೆಚ್. ಎಸ್. ನಾಗರಾಜಯ್ಯ ಕೆ.ಸಿ.ಎಸ್. ಸಹಕಾರ ಸಂಘಗಳ ಅಪರ ನಿಬಂಧಕರು (ನಿ) ಬೆಂಗಳೂರು.**

ಸಹಕಾರಿಗಳ ಮೂಲ ಉದ್ದೇಶ ಸದಸ್ಯರ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವುದು ಹಾಗೂ ಆರ್ಥಿಕ ಶೋಷಣೆ ನಿರ್ಮೂಲನೆ ಮಾಡುವುದು. ಸಹಕಾರಿಗಳು ಮೂಲಭೂತವಾಗಿ ಆರ್ಥಿಕ ಘಟಕಗಳಾಗಿ ಕಾರ್ಯನಿರ್ವಹಿಸುವುದು. (They are Economic Enterprisess) ದೇಶದ ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಸಹಕಾರಿಗಳ ಕಾರ್ಯನಿರ್ವಹಣೆ ತೀವ್ರ ಬದಲಾವಣೆ ಮತ್ತು ವಿಕಾಸದ ಅಗತ್ಯವಿದೆ. ಸಹಕಾರಿ ಕ್ಷೇತ್ರದಲ್ಲಿ ಕಾರ್ಪೋರೇಟ್ ಕಂಪನಿಗಳ ಸ್ವರೂಪ ಮತ್ತು ಸ್ಪರ್ಶ ಅತ್ಯವಶ್ಯಕವಾಗಿದೆ.

ಸಹಕಾರಿಗಳು ಉತ್ತಮ ಕಾರ್ಯನಿರ್ವಹಣೆಯಲ್ಲಿವೆ (Good Governance) ಎಂಬುದದರೆ ಪಾರದರ್ಶಕತೆ (Transparence) ಉತ್ತರದಾಯಿತ್ವ (Accountability) ವೃತ್ತಿಪರತೆ (Pofessinalism) ಲಾಭದಾಯಕ (Profit) ಮಾಹಿತಿ ಮತ್ತು ತಂತ್ರಜ್ಞಾನ (Information & Technology) ಲೆಕ್ಕಪರಿಶೋಧನೆ (propriety Audit) ಮತ್ತು ಪ್ರಾಮಾಣಿಕತೆ ಹಾಗೂ ಬದ್ಧತೆ (Honesty and commitment) ಗಳಿಂದ ಕೂಡಿರಬೇಕು. ಸಹಕಾರಿಗಳು ಆಡಳಿತಾತ್ಮಕ ಕಾರ್ಯಗಳೊಡನೆ, ಹಣಕಾಸಿನ ವ್ಯವಹಾರ ಹಾಗೂ ವಹಿವಾಟುಗಳಿಗೆ ಆದ್ಯ ಗಮನ ನೀಡುವುದು ಕಡ್ಡಾಯವಾಗಿದೆ. ಸಹಕಾರಿಗಳ ಕೇಂದ್ರ ಬಿಂದು ಆರ್ಥಿಕ ಚಟುವಟಿಕೆಗಳು ಸಹಕಾರಿಗಳ ಉಪವಿಧಿಗಳ ಅನ್ವಯ ಠೇವಣಿ ನಿಯಮಗಳು ಸಾಲಗಳ ನಿಯಮಗಳು ಹೂಡಿಕೆ ಹಾಗೂ ಸೇವಾ ನಿಯಮಗಳನ್ನು ಕಾಲಕಾಲಕ್ಕೆ ತಕ್ಕಂತೆ ರೂಪಿಸಿ ಅನುಷ್ಠಾನಕ್ಕೆ ತರುವುದು ಆದ್ಯತೆ ಆಗಿದೆ. ಕಾಯ್ದೆ ಮತ್ತು ನಿಯಮಗಳ ರೀತ್ಯ ವಾರ್ಷಿಕ ಸಭೆ, ಚುನಾವಣೆಗಳು ಆಡಳಿತ ಮಂಡಳಿ ಸಭೆ ಲೆಕ್ಕಪರಿಶೋಧನೆ ಜೊತೆಗೆ ದೈನಂದಿನ ವ್ಯವಹಾರ ಸಂಬಂಧಿಸಿದಂತೆ ನೀತಿ ನಿರೂಪಣೆ ನಿರ್ದೇಶಕರ ಮಂಡಳಿಯ ಜವಾಬ್ದಾರಿಯಾಗಿದೆ. ಸದಸ್ಯರ ಅಪೇಕ್ಷೆ ಹಾಗೂ ಅಗತ್ಯಕ್ಕೆ ಅನುಗುಣವಾಗಿ ಕಾರ್ಯಕ್ರಮ ಹಾಗೂ ಯೋಜನೆಗಳನ್ನು ರೂಪಿಸಿ ಆಚರಣೆಗೆ ತರುವುದು. ಸದಸ್ಯರು ಸಭೆಗಳಿಗೆ ಮಾತ್ರ ಸೀಮಿತವಾಗಿದೆ ಸಹಕಾರಿಯ ಕಾರ್ಯಯೋಜನೆಗಳಲ್ಲಿ ಸಕ್ರೀಯಾ ಪಾಲುದಾರಾಗಲು ಉತ್ತೇಜಿಸುವುದರಲ್ಲಿ ನಿರ್ದೇಶಕರ ಪಾತ್ರ ಮಹತ್ವಾದಾಗಿದ್ದು ಮೇಲಾಗಿ ನಿರ್ದೇಶಕರ ಮಂಡಲಿ ವೃತ್ತಿ ಪರಿಣಿತಿಯಿಂದ ನೀತಿ ನಿರೂಪಣೆ ಹಾಗೂ ತೀರ್ಮಾನಗಳನ್ನು ತೆಗೆದುಕೊಳ್ಳುವುದರಲ್ಲಿ ಆರ್ಥಿಕ ಶಿಸ್ತು ಅಡಗಿರುತ್ತದೆ. ಬದಲಾದ ಸಾಮಾಜಿಕ ಆರ್ಥಿಕ ಹಾಗೂ ತಾಂತ್ರಿಕ ಸನ್ನಿವೇಶಕ್ಕೆ ಅನುಗುಣವಾಗಿ ಸಹಕಾರಿಗಳ ಕಾರ್ಯನಿರ್ವಹಣೆ ಅಗತ್ಯವಿದ್ದು, ಸಹಕಾರಿಗಳ ಕಾರ್ಯನಿಯೋಜನೆಗಳು ವೈವಿಧ್ಯಮಯವಾಗಿ ಕೂಡಿರಬೇಕು.

ಸಹಕಾರಿಗಳು ನೀಡಿರುವ ಸೇವೆಗಳು ಅವುಗಳಿಂದ ಗಳಿಸುವ ಲಾಭಾಂಶ ಶೋಷಣೆ ರಹಿತವಾಗಿರಬೇಕು. ಸಹಕಾರಿಗಳು ಗಳಿಸುವ ಲಾಭ ಸಂಘದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ನಿಧಿಗಳ ರಚನೆ, ಸಿಬ್ಬಂದಿಗಳ ಆರ್ಥಿಕ ವೆಚ್ಚ, ಶಾಖೆಗಳ ವಿಕಾಸ ಮತ್ತು ಷೇರುದಾರರ ಷೇರು ಮೊತ್ತಕ್ಕೆ ಗರಿಷ್ಠ ಲಾಭ ಶೇ.25/– ಅಲ್ಲದಿದ್ದರು, ಸೂಕ್ತ ಹಾಗೂ ಸಮಂಜಸವಾದ ಡಿವಿಡೆಂಡ್ ಪಾವತಿಸಲು ಸಾಮರ್ಥವಾಗಿರಬೇಕು. ಆಗ ಮಾತ್ರ ಸದಸ್ಯರ ವಿಶ್ವಾಸ ಮತ್ತು ನಂಬಿಕೆಗೆ ಸಂಸ್ಥೆ ಪಾತ್ರವಾಗುತ್ತದೆ. ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ನಿರ್ವಹಣೆಯಲ್ಲಿ ನಿರ್ದೇಶಕ ಮಂಡಲಿಯವರು ಕೆಳಕಂಡಂತೆ ಕ್ರಮವಿಡುವುದು "ಆದಾಯ ತೋರಿಕೆ ತಡೆಗಟ್ಟುವುದು (Page the leakage of income) ಸಂಘದ ವ್ಯವಹಾರದಲ್ಲಿ ನಡೆಯಬಹುದಾದ ಆದಾಯ ಸೋರಿಕೆಯ ಮೇಲೆ ಆಡಳಿತ ಮಂಡಳಿ ನಿರ್ದೇಶಕರು ತೀವ್ರ ನಿಗಾವಹಿಸುವ ಮೂಲಕ ಸೋರಿಕೆ ತಡೆಯುವುದು. ಅನವಶ್ಯಕ ಹಾಗೂ ಅತಿಯಾದ ವೆಚ್ಚಗಳನ್ನು ಕಡಿತಗೊಳಿಸಲು ನಿಯಂತ್ರಣ ವಿಡುವುದು (control over unnecessary expenditure)

ದುಡಿಯವ ಬಂಡವಾಳದಲ್ಲಿ ಸ್ಥಿರಾಸ್ತಿಗೆ ಖರೀದಿ ತಡೆ (Avoid working capital to purchase of immovable property) ಸಂಘದಲ್ಲಿನ ಶೇರು ಸದಸ್ಯರ ಠೇವಣಿ, ಬ್ಯಾಂಕಿನ ಸಾಲ ಇತ್ಯಾದಿಗಳಿಂದ ಸ್ಥಿರಾಸ್ತಿಗಳ ಖರೀದಿಗೆ ಉಪಯೋಗಿಸಿದರೆ ಬಂಡವಾಳಕ್ಕೆ ಧಕ್ಕೆ ಉಂಟಾಗುವುದಲ್ಲದೆ ಠೇವಣಿ ಮತ್ತು ಬ್ಯಾಂಕಿನ ಸಾಲಗಳನ್ನು ಸಕಾಲಕ್ಕೆ ಹಿಂದುರಿಗಿಸಲು ತೊಂದರೆಯಾಗುತ್ತದೆ. ಮೇಲಾಗಿ ವ್ಯವಹಾರಕ್ಕೆ ಆಚರಣೆಗಳು ದುಡಿಯುವ ಬಂಡವಾಳದಿಂದ ಖರ್ಚುಮಾಡಬಾರದು. ಅವುಗಳ ಪ್ರತ್ಯೇಕ ನಿಧಿಯಲ್ಲಿನ ಹಣದಿಂದಲೇ ಆಚರಿಸುವುದು ಸೂಕ್ತ.

ಸಂಪನ್ಮೂಲ ಕ್ರೂಢೀಕರಣದಲ್ಲಿ ಎಚ್ಚರಿಕೆ ವಹಿಸುವುದು. ಸಂಪನ್ಮೂಲ ಕ್ರೂಢೀಕರಣದಲ್ಲಿ ತೀರ್ಮಾನ ಕೈಗೊಳ್ಳುವ ಸಂಪೂರ್ಣ ಅಧಿಕಾರ ನಿರ್ದೇಶಕ ಮಂಡಳಿಯದು. ಠೇವಣಿ ಸಂಗ್ರಹಣೆಯಲ್ಲಿ ಎಚ್ಚರಿಕೆ ಕ್ರಮಗಳಾದ – ಬಡ್ಡಿದರ ನಿಗದಿಗೊಳಿಸುವಿಕೆ, ಕಡಿಮೆ ಬಡ್ಡಿ ದರದ ಠೇವಣಿಗೆ ಆದ್ಯತೆ, ಅಲ್ಪಾವಧಿ ಠೇವಣಿಗೆ ಆದ್ಯತೆ, ಠೇವಣಿಗೆ ವೆಚ್ಚ (Cost on Deposit) ಸರಾಸರಿ ಶೇ.6.5/– ಮಿತಿಯಲ್ಲಿಡುವುದು. ಠೇವಣಿ ಮಿಶ್ರಣಕ್ಕೆ ಆದ್ಯತೆ (Mixing of low cost and high cost deposit) ಅನುಪಾತ ಶೇ: 60.40 ನಿರ್ವಹಣೆ ಇತ್ಯಾದಿಗಳು ಹೂಡಿಕೆಗಳಲ್ಲಿ ನಷ್ಟ ಅನುಭವಿಸಬಾರದು (No loss from investments) ಯಾವುದೇ ಕಾರಣಕ್ಕೂ ಹೂಡಿಕೆಯಿಂದ ನಷ್ಟವಾಗದಂತೆ ಅದರಲ್ಲೂ ಅಸಲಿಗೆ ಧಕ್ಕೆಯಾಗದಂತೆ ಹೂಡಿಕೆ (port folio) ನಿರ್ವಹಣೆ ಮಾಡುವುದು.

ವ್ಯವಹಾರದಲ್ಲಿ ಲಾಭ ಹೆಚ್ಚಿಸಿ ಖರ್ಚು ಕಡಿಮೆಗೊಳಿಸುವುದು (To reduce operational cost instruction) ದೈನಂದಿನ ನಗದು ಶಿಲ್ಕು ಹಾಗೂ ಬ್ಯಾಂಕ್ ಖಾತೆಗಳಲ್ಲಿನ ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿನ ಶಿಲ್ಕನ್ನು ಮಿತಿಗೊಳಿಸುವುದು (Limited maintenance of cash on

Hand and Bank Balance) ಬಂಡವಾಳ ರಹಿತ ವ್ಯವಹಾರ ಹೆಚ್ಚಿಸುವುದು. ಸಂಘದ ಒಟ್ಟು ವಹಿವಾಟಲ್ಲಿ ಶೇ. 15 ರಿಂದ 20% ರಷ್ಟನ್ನು ನಿರ್ವಹಿಸಿದಲ್ಲಿ, ಸಂಘ ಹೆಚ್ಚಿನ ಲಾಭಗಳಿಸಲು ಅನುವಾಗುತ್ತದೆ. (Non-Fund Business) ಇಂದಿನ ಸೇವಾ ಕ್ಷೇತ್ರದಲ್ಲಿ ಪ್ರಮುಖವಾಗಿರುತ್ತದೆ.

1) ಸಂಘದ ವಹಿವಾಟು (Turn Over) ವರ್ಷದಿಂದ ವರ್ಷಕ್ಕೆ ದುಪ್ಪಟ್ಟುಗೊಳಿಸುವುದು (Doubling). ಇದರಿಂದ ಠೇವಣಿ, ಷೇರು, ಸದಸ್ಯತ್ವ, ಸಾಲ, ಸೇವಾ ಚಟುವಟಿಕೆಗಳು ವಿಸ್ತರಣೆ, ಆರ್ಥಿಕ ಶಿಸ್ತಿನಲ್ಲಿ ಸದೃಢಗೊಳಿಸುತ್ತದೆ.

2) ಸಹಕಾರಿಯಲ್ಲಿನ ಆಂತರಿಕ ಮೇಲ್ವಿಚಾರಣೆ ಹಾಗೂ ಪರಿವೀಕ್ಷಣೆ (Internal Checks and Balance) ಹೆಚ್ಚಿನ ಮಹತ್ವ ನೀಡತಕ್ಕದ್ದು. ಇದು ಆರ್ಥಿಕ ಶಿಸ್ತಿಗೆ ಮೂಲದಾರವಾಗಿದೆ.

3) ಸಹಕಾರಿಗಳಲ್ಲಿ (ಸಂಘದಲ್ಲಿ) ಮಾನವ ಸಂಪನ್ಮೂಲ ದಕ್ಷತೆ ಹಾಗೂ ಉತ್ಕೃಷ್ಟತೆಯಿಂದ ಕೂಡಿರಬೇಕು. ಯಾವುದೇ ಕಾರಣಕ್ಕೂ ಮಾನವ ಸಂಪನ್ಮೂಲ (ಸಿಬ್ಬಂದಿ) ಅನುತ್ಪಾದಕ ಆಸ್ತಿ ಆಗಬಾರದು ( Non Performing Asset). ಸಂಘದಲ್ಲಿ ಎಲ್ಲಾ ಆಸ್ತಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಸಾಮರ್ಥ್ಯ ಮಾನವ ಸಂಪನ್ಮೂಲಕ್ಕೆ ನಿಲುಕಬೇಕು.

4) ಸಾಲ ವಸೂಲಾತಿ ಬಗ್ಗೆ ಸಕಾಲಿಕ ಮತ್ತು ತೀವ್ರ ಕ್ರಮ ನಿರಂತರವಾಗಿರಬೇಕು. (Recovery management) ಸುಸ್ಥಿಸಾಲದ ಪ್ರಮಾಣ ಯಾವುದೇ ಕಾರಣಕ್ಕೂ ಶೇ 5% ಮೀರದೆ, ವಸೂಲಾತಿ ಪ್ರಮಾಣ ಶೇ100% ಅಥವಾ 95% ಕಡಿಮೆಯಾಗಬಾರದು. ಏಕೆಂದರೆ ಸಂಘಕ್ಕೆ ಮೂಲ ಆದಾಯ ಬಡ್ಡಿ ಹಣ. ಆದ ಕಾರಣ ಸಂಘದ ಆರ್ಥಿಕತೆ ಶಿಸ್ತು ವಸೂಲಾತಿ ಪ್ರಮಾಣ ಆಧರಿಸಿದೆ.

5) ಸಂಘವು ಕ್ರೂಡಿಕೃತ ನಷ್ಟಕ್ಕೆ ಒಳಗಾಗದೆ ಚಾಲ್ತಿ ಸಬಲತೆ ಹಾಗೂ ಸುಸ್ಥಿರ ಸಬಲತೆ (Current Viability And Sustainable Violability) ಯಲ್ಲಿ ಮುಂದುವರೆದಲ್ಲಿ ಆರ್ಥಿಕ ಶಿಸ್ತಿಗೆ ದಕ್ಕೆವುಂಟುವಾಗುವುದಿಲ್ಲ.

ಈ ಮೇಲ್ಕಂಡ ಎಲ್ಲಾ ಅಂಶಗಳು ಸಹಕಾರಿಗಳ ಆರ್ಥಿಕ ಶಿಸ್ತಿಗೆ ಪೂರಕವಾಗಿರುವ ಅಂಶಗಳಾಗಿವೆ. ಇದಲ್ಲದೆ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣದಲ್ಲಿನ ಅಧಿಕಾರ ಮತ್ತು ಪ್ರಾಕಾರ್ಯಗಳನ್ನು ನಿರ್ದೇಶಕರು ಚಾಚು ತಪ್ಪದೆ ನಿರ್ವಹಿಸಿದಲ್ಲಿ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತನ್ನು ಸಂರಕ್ಷಿಸುವಲ್ಲಿ ಯಾವುದೇ ಲೋಪವಾಗುವುದಿಲ್ಲ. ಸಾಲ ನೀಡುವಲ್ಲಿ ಹೆಚ್ಚಿನ ಎಚ್ಚರಿಕೆ ಹಾಗೂ ಸಾಲ ಮರುಪಾವತಿಸಿಕೊಳ್ಳುವಲ್ಲಿ ವೈಯಕ್ತಿಕ ಮುತುವರ್ಜಿಯನ್ನು ಸಿಬ್ಬಂದಿಗೆ ನೀಡುವುದು. ಸಾಮೂಹಿಕವಾಗಿ ಹಾಗೂ ವೈಯಕ್ತಿಕವಾಗಿ ಸಹಕಾರಿಗಳ ಏಳಿಗೆ ಮತ್ತು ಬೆಳವಣಿಗೆಗೆ ಪೂರಕ ಕೊಡುಗೆಗಳನ್ನು ನೀಡುವುದು ಅವರ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಇದರಿಂದ ಸಹಕಾರಿಗಳ ಆರ್ಥಿಕ ಶಿಸ್ತು ಸುಭದ್ರ ಹಾಗೂ ಸುಸ್ಥಿರವಾಗಿರುತ್ತದೆ.

**27. ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು –**

(1) ಈ ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು ಮಂಡಲಿಯು–

(ಎ) ಸದಸ್ಯರುಗಳನ್ನು ಸೇರಿಸಿಕೊಳ್ಳಲು ಮತ್ತು ತೆಗೆದುಹಾಕಲು;

(ಬಿ) ಪದಾಧಿಕಾರಿಗಳನ್ನು ಚುನಾಯಿಸಲು ಮತ್ತು ತೆಗೆದುಹಾಕಲು;

(ಸಿ) ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕ ಮಾಡಲು ಮತ್ತು ತೆಗೆದುಹಾಕಲು;

(ಡಿ) ಸಿಬ್ಬಂದಿ ಸಂಖ್ಯೆಯನ್ನು ನಿಗದಿಪಡಿಸಲು;

(ಇ) ಸಂಸ್ಥೆಯ ಹಾಗೂ ಸದಸ್ಯರುಗಳ ಸೇವೆಗಳಿಗೆ ಸಂಬಂಧಪಟ್ಟಂತೆ ಕಾರ್ಯನೀತಿಗಳನ್ನು ರೂಪಿಸಲು;

(ಎಫ್) ಈ ಕೆಳಗಿನವುಗಳ ಬಗ್ಗೆ, ಎಂದರೆ,–

(i) ನಿಧಿಗಳ ಅಭಿರಕ್ಷೆ ಮತ್ತು ಹೂಡಿಕೆ;

ii) ಲೆಕ್ಕಪತ್ರಗಳ ನಿರ್ವಹಣೆ;

(iii) ವಿವಿಧ ನಿಧಿಗಳ ಸಂಗ್ರಹಣೆ, ಬಳಕೆ ಮತ್ತು ಹೂಡಿಕೆ;

(iv) ಶಾಸನಬದ್ಧ ವಿವರಪಟ್ಟಿಕೆಯನ್ನು ಸಲ್ಲಿಸುವುದೂ ಸೇರಿದಂತೆ ಸೂಕ್ತ ವ್ಯವಸ್ಥಾಪನ ಮಾಹಿತಿ ವ್ಯವಸ್ಥೆಗಳು;

(v) ಸಹಕಾರಿಯ ಪರಿಣಾಮಕಾರಿ ನಿರ್ವಹಣೆಯ ಸಲುವಾಗಿ ಅವಶ್ಯಕಯಿವಾಗಬಹುದಾದಂಥ ಇತರ ವಿಷಯಗಳು;

ಇವುಗಳ ಬಗ್ಗೆ ವಿನಿಯಮಗಳನ್ನು ರಚಿಸಲು;

(ಜಿ) ಸಾಮಾನ್ಯ ನಿಕಾಯದ ಅನುಮೋದನೆಗಾಗಿ ವಾರ್ಷಿಕ ವರದಿ, ವಾರ್ಷಿಕ ಹಣಕಾಸು ವಿವರಪಟ್ಟಿ, ವಾರ್ಷಿಕ ಯೋಜನೆ ಮತ್ತು ಬಜೆಟ್ಟನ್ನು ಮಂಡಿಸಲು;

(ಹೆಚ್) ಲೆಕ್ಕಪರಿಶೋಧನೆ ಮತ್ತು ಪಾಲನಾ ವರದಿಗಳನ್ನು ಪರಿಶೀಲಿಸಲು ಮತ್ತು ಅವುಗಳನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು;

1[(ಹೆಚ್–1) ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಪರಿಶೀಲಿಸಿ, ವಿಚಾರಣೆಯಲ್ಲಿ ತೋರಿಸಲಾದ ಅಕ್ರಮಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಪರಿಶೀಲಿಸಲು ಮತ್ತು ಅದನ್ನು ಸಾಮಾನ್ಯ ನಿಕಾಯದ ಮುಂದೆ ಮಂಡಿಸಲು;

(ಹೆಚ್–2) ಪ್ರತಿವರ್ಷ ಸೆಪ್ಟಂಬರ್ ತಿಂಗಳ ಒಂದರೊಳಗೆ ಹಿಂದಿನ ಸಹಕಾರ ವರ್ಷದ ಲೆಕ್ಕ ಪತ್ರಗಳನ್ನು ಪರಿಶೋಧಿಸಿಕೊಡುವಂತೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪಡೆಯುವಂತೆ ಮಾಡಲು;

(ಹೆಚ್–3) ಪ್ರತಿ ವರ್ಷ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು;

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 39
8Licensed to post without Prepayment License No. PMG BG/WPP-384/2023-2025.



(ಹೆಚ್–4) ಅಗತ್ಯವಿದ್ದಾಗಲೆಲ್ಲ ಅಥವಾ ಕೋರಿಕೆಯ ಮೇರೆಗೆ ವಿಶೇಷ ಸಾಮಾನ್ಯ ಸಭೆಯನ್ನು ನಡೆಸಲು;

(ಹೆಚ್–5) ಪ್ರತಿ ವರ್ಷ ಸೆಪ್ಟಂಬರ್ ಮೂವತ್ತರೊಳಗಾಗಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು ಮತ್ತು ಮಾಹಿತಿಯನ್ನು ಸಲ್ಲಿಸಲು;]

(ಐ) ಇತರ ಸಹಕಾರಿಗಳ ಸದಸ್ಯತ್ವವನ್ನು ಪರಿಶೀಲಿಸಲು;

(ಜೆ) ಸಾಮಾನ್ಯ ನಿಕಾಯವು ಪ್ರತ್ಯಾಯೋಜಿಸಬಹುದಾದಂಥ ಅಥವಾ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಲು,

–ಅಧಿಕಾರ ಹೊಂದಿರತಕ್ಕದ್ದು.

**28. ಪದಾಧಿಕಾರಿಗಳನ್ನು ಚುನಾಯಿಸುವುದು –**

1[(1) ಮಂಡಲಿಯ ಚುನಾವಣೆ ನಡೆದ ದಿನಾಂಕದಿಂದ ಹದಿನೈದು ದಿನಗಳೊಳಗೆ 2[ಸಹಕಾರಿ ಚುನಾವಣಾ ಪ್ರಾಧಿಕಾರವು ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಉಪವಿಧಿಗಳ ಪ್ರಕಾರ ಚುನಾಯಿಸಬೇಕಾದ ಇತರ ಪದಾಧಿಕಾರಿಗಳನ್ನು ಚುನಾಯಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.]

(2) ಅಧ್ಯಕ್ಷ ಅಥವಾ ಸಭಾಪತಿ ಅಥವಾ ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷ ಅಥವಾ ಉಪ–ಸಭಾಪತಿಯು–

(ಎ) ಮಂಡಲಿಯ ಮತ್ತು ಸಾಮಾನ್ಯ ನಿಕಾಯದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು;

(ಬಿ) ಪದಾಧಿಕಾರಿಗಳ ಚುನಾವಣೆಯನ್ನು ಬಿಟ್ಟು ಉಳಿದೆಡೆ ಮಂಡಲಿಯು ತೀರ್ಮಾನಿಸಬೇಕಾದ ಯಾವುದೇ ವಿಷಯಗಳ ಮೇಲೆ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಮಾತ್ರ ನಿರ್ಣಾಯಕ ಮತ ಚಲಾಯಿಸತಕ್ಕದ್ದು :

ಪರಂತು, ಪದಾಧಿಕಾರಿಗಳ ಚುನಾವಣೆಯಲ್ಲಿ ಸಮಾನ ಮತಗಳು ಸಿಕ್ಕಿದ ಸಂದರ್ಭದಲ್ಲಿ ಚೀಟಿಯನ್ನು ಎತ್ತುವ ಮೂಲಕ ಚುನಾಯಿಸತಕ್ಕದ್ದು; ಮತ್ತು

(ಸಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾದಂಥ ಅಥವಾ ಮಂಡಲಿಯು ಪ್ರತ್ಯಾಯೋಜಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

1[(3) ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪ ಸಭಾಪತಿ ಮತ್ತು ಇತರ ಪದಾಧಿಕಾರಿಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಹಾಗೂ ಮಂಡಲಿಯ ಅವಧಿಯ ಜೊತೆಗೆ ಅಂತ್ಯವಾಗತಕ್ಕದ್ದು.]

2[ಪರಂತು, ಸಂಯುಕ್ತ ಸಹಕಾರಿಯ ಪದಾಧಿಕಾರಿಯ ಅಧಿಕಾರಾವಧಿಯು ಪ್ರತಿನಿಧಿಸುವ ಸಹಕಾರಿಯ ನಿರ್ದೇಶಕನಾಗಿರುವುದು ನಿಂತುಹೋದಲ್ಲಿ ಮುಕ್ತಾಯಗೊಳ್ಳತಕ್ಕದ್ದು.]

3[28ಎ.– ಸಹಕಾರಿಯ ಮಂಡಲಿಯ ಸದಸ್ಯ ಅಥವಾ ಪದಾಧಿಕಾರಿಯ ರಾಜೀನಾಮೆ– ಸಹಕಾರಿಯ ಮಂಡಲಿ ಸದಸ್ಯನು ಅಥವಾ ಪದಾಧಿಕಾರಿಯು ಮಂಡಲಿಯ ತನ್ನ ಸದಸ್ಯತ್ವಕ್ಕೆ ಅಥವಾ ಸಂದರ್ಭಾನುಸಾರವಾಗಿ ಪದಾಧಿಕಾರಿ ಹುದ್ದೆಗೆ ತನ್ನ ಸ್ವಹಸ್ತ ಬರಹದ ಮೂಲಕ ರಾಜೀನಾಮೆಯನ್ನು ಮುಖ್ಯ ಕಾರ್ಯನಿರ್ವಾಹಕನಿಗೆ ನೀಡಬಹುದು. ಮತ್ತು ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ತನ್ನ ಸ್ವಹಸ್ತಬರಹದ ಮೂಲಕ ಅಂತಹ ರಾಜೀನಾಮೆಯನ್ನು ಮುಖ್ಯ ಕಾರ್ಯನಿರ್ವಾಹಕನಿಗೆ ಹಿಂಪಡೆಯಲು ಪ ತ್ರ ವನ್ನು ನೀಡದ ಹೊರತು, ರಾಜೀನಾಮೆ ನೀಡಿದ ದಿನಾಂಕದಿಂದ ಹದಿನೈದು ದಿನಗಳು ಮುಗಿದ ನಂತರ ಆತನ ಸ್ಥಾನವು ಅಥವಾ ಸಂದರ್ಭಾನುಸಾರವಾಗಿ ಹುದ್ದೆಯು ತೆರವಾಗತಕ್ಕದ್ದು. ಮುಖ್ಯ ಕಾರ್ಯನಿರ್ವಾಹ ಕನು ರಾಜೀನಾಮೆ ಪತ್ರ ನೀಡಿದ ನಂತರ ಸಮಾವೇಶಗೊಳ್ಳುವ ಮಂಡಲಿಯ ಸಭೆಯ ಮುಂದಿಡತಕ್ಕದ್ದು.]

4[29.ಆಕಸ್ಮಿಕ ರಿಕ್ತತೆಗಳನ್ನು ತುಂಬುವುದು – ಮಂಡಲಿಯು ತನ್ನ ಮೂಲ ಪದಾವಧಿಯ ಅರ್ಧದಷ್ಟಕ್ಕಿಂತ ಕಡಿಮೆ ಉಳಿದಿದ್ದಾಗ ಮಾತ್ರ, ಆಡಳಿತ ಮಂಡಲಿಯಲ್ಲಿ ಉಂಟಾಗುವ ಆಕಸ್ಮಿಕ ರಿಕ್ತತೆಗಳನ್ನು ಯಾವ ವರ್ಗದ ಸದಸ್ಯರ ಸಂಬಂಧದಲ್ಲಿ ಆಕಸ್ಮಿಕ ರಿಕ್ತತೆ ಉಂಟಾಗಿದೆಯೋ ಅದೇ ವರ್ಗದ ಸದಸ್ಯರೊಳಗೆ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳಬಹುದು.]

ಕೇಂದ್ರ ಕಛೇರಿ : “ಸೌಹಾರ್ದ ಸಹಕಾರಿ ಸೌಧ” ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : “ಸೌಹಾರ್ದ ಸಹಕಾರಿ ಸೌಧ”, ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : “ಸೌಹಾರ್ದ ಸಹಕಾರಿ ಸೌಧ”, ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : “ಸೌಹಾರ್ದ ಸಹಕಾರಿ ಸೌಧ”, ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003